
ಅಖಿಲ ಕರ್ನಾಟಕ

# ಶಿಕ್ಷಕ ಸಮಾಚಾರ


ಜುಲೈ 2013 ಮಾಸ ಪತ್ರಿಕೆ

ಸಂಪುಟ : 35
ಸಂಚಿಕೆ : 10
ಪುಟ : 12
ಬೆಲೆ : ₹ 5/-

## ಆಷಾಢದ ವಿಶೇಷ – ಗುರುವಂದನಾ









ಪುಟ 4

## 28 ನೇ ಪ್ರತಿಭಾ ಪುರಸ್ಕಾರ

ಪ್ರತಿಭಾ ಪುರಸ್ಕಾರ ಕಾರ್ಯಕ್ರಮವನ್ನು ಪ್ರೊ. ಕೃ. ನರಹರಿಯವರು ಉದ್ಘಾಟಿಸುತ್ತಿರುವುದು. ಜೊತೆಯಲ್ಲಿ ಮುಖ್ಯ ಅತಿಥಿಗಳಾದ ವೂಡೆ ಪಿ. ಕೃಷ್ಣ, ಮತ್ತು ಸಂಘದ ಅಧ್ಯಕ್ಷರಾದ ಬಾಲಕೃಷ್ಣ ಭಟ್, ಜಿಲ್ಲಾಧ್ಯಕ್ಷ ಸುಗೂರು ತಿಪ್ಪೇಸ್ವಾಮಿ.

A Journal of Karnataka State Secondary Teachers' Association

# ಸಂಪಾದಕೀಯ

ಜಗತ್ತಿನಲ್ಲಿ ಮಾನವನ ಸಾಧನೆ ಅಪಾರ. ತಾನು ವಾಸಿಸುವ ಭೂಮಿಯಲ್ಲಿ ತನಗೆ ಬೇಕಾದ ಎಲ್ಲಾ ಸೌಲಭ್ಯಗಳನ್ನೂ ಕಂಡು ಕೊಂಡಿದ್ದಾನೆ. ಅಷ್ಟೇ ಅಲ್ಲದೆ ಬೇರೆ ಗ್ರಹಗಳಿಗೂ ಕಾಲಿಟ್ಟಿದ್ದಾನೆ. ಹೀಗೆ ತನ್ನ ಬುದ್ಧಿ ಚಾತುರ್ಯದಿಂದ ಹೆಮ್ಮೆಯಿಂದ ಬೀಗುತ್ತಿದ್ದಾನೆ. ಮನುಷ್ಯನ ಸಾಧನೆ, ಪ್ರಯತ್ನಗಳೆಲ್ಲಾ ಮೆಚ್ಚಬೇಕಾದದ್ದೇ. ಆದರೆ ಪ್ರಕೃತಿಯ ಆಟದ ಮುಂದೆ ಮನುಷ್ಯನ ಸಾದನೆಯ ಬೀಗುವಿಕೆ ನಡೆಯುವುದಿಲ್ಲ. ಪ್ರಕೃತಿ ಮುನಿದರೆ ಏನೆಲ್ಲಾ ಅನಾಹುತಗಳಾಗಬಹುದೆಂಬುದಕ್ಕೆ ಕಳೆದ ತಿಂಗಳು ಹಿಮಾಂಚಲದಲ್ಲಿ ಉಂಟಾದ ಮಳೆರಾಯನ ಆರ್ಭಟವೇ ಸಾಕ್ಷಿಯಾಗಿದೆ. ಅನಿರೀಕ್ಷಿತ ಜಲಪ್ರವಾಹದಿಂದಾಗಿ ಉತ್ತರಾಂಚಲ, ವಿಶೇಷವಾಗಿ ಭಾರತೀಯರ ಪವಿತ್ರ ಯಾತ್ರಾ ಸ್ಥಳ ಕೇದಾರನಾಥ, ಬದರೀನಾಥ ಹಾಗೂ ಸುತ್ತಲ ಪ್ರದೇಶಗಳಲ್ಲಿ ಉಂಟಾದ ಅನಾಹುತ ಎಂಥವರ ಮನವನ್ನೂ ಕಲಕುತ್ತದೆ. ಈ ಪ್ರವಾಹದಲ್ಲಿ ಅನೇಕರ ಪ್ರಾಣ ಹಾನಿಯಾಗಿದೆ. ಇನ್ನೂ ಹಲವರು ಅನೇಕ ರೀತಿಯಲ್ಲಿ ಕಷ್ಟ ನಷ್ಟಗಳಿಗೆ ಒಳಗಾಗಿದ್ದಾರೆ. ಅವರೆಲ್ಲರ ದುಃಖ ಕಷ್ಟಗಳಿಗೆ 'ಶಿಕ್ಷಕ ಸಮಾಚಾರ'ವು ಮನಃಪೂರ್ವಕವಾಗಿ ಸ್ಪಂದಿಸುತ್ತದೆ. ಈ ಸಂದರ್ಭದಲ್ಲಿ ಅಲ್ಲಿ ಸಂಕಷ್ಟಗಳಿಗೆ ಸಿಕ್ಕಿಕೊಂಡವರ ರಕ್ಷಣೆಯ ಕಾರ್ಯವನ್ನು ನಮ್ಮ ಸೈನಿಕರು ನಿರ್ವಹಿಸಿದ ರೀತಿ ಮೆಚ್ಚುವಂಥದ್ದು. ಹಗಲು ರಾತ್ರಿ ಎನ್ನದೆ, ತಮ್ಮ ನಿದ್ರಾಹಾರಗಳಿಗೂ ಮಹತ್ವ ಕೊಡದೆ ಸಂಕಷ್ಟದಲ್ಲಿದ್ದ ಪ್ರಯಾಣಿಕರು, ಜನತೆಯನ್ನು ರಕ್ಷಿಸಲು ಹರಸಾಹಸ ಪಟ್ಟಿದ್ದು ಪ್ರಶಂಸನೀಯ, ಅನುಕರಣೀಯ. ಸೇನೆಯ ನಿಸ್ವಾರ್ಥ ಮನೋಭಾವದಿಂದಲೇ ನಾವೆಲ್ಲರೂ ಸುರಕ್ಷಿತವಾಗಿದ್ದೇವೆ ಎಂದರೆ ತಪ್ಪಾಗಲಾರದು.

ಜುಲೈ ತಿಂಗಳ ವಿಶೇಷ 'ಗುರು ಪೂರ್ಣಿಮೆ' ಗುರುವಿಗೆ ಸಮಾಜದಲ್ಲಿ ಬಹಳ ಗೌರವದ ಸ್ಥಾನ ಮೊದಲಿನಿಂದಲೂ ಇದೆ. ಶ್ರೀ ಕೃಷ್ಣ ಜಗದ್ಗುರು. ಆದ್ದರಿಂದಲೇ ಶ್ರೀ ಕೃಷ್ಣನನ್ನು 'ಕೃಷ್ಣಂ ವಂದೇ ಜಗದ್ಗುರುಂ' ಎಂದು ವಂದಿಸುತ್ತೇವೆ. ಅಂತಹ ಜಗದ್ಗುರುವಿನ ಅಪಾರ ಜ್ಞಾನ, ಚಾತುರ್ಯ, ಮಹಿಮೆಗಳನ್ನು ತಮ್ಮ ಮಹಾಕಾವ್ಯದಲ್ಲಿ ವರ್ಣಿಸುವ ಮೂಲಕ ವ್ಯಾಸ ಮಹರ್ಷಿಗಳು ಜಗದ್ಗುರುವಿಗೆ ತಮ್ಮ ಗೌರವವನ್ನು ಸಲ್ಲಿಸಿದ್ದಾರೆ. ವ್ಯಾಸರ ಪ್ರತಿಭೆ ಅಪಾರ, ವ್ಯಾಸರು ನಮ್ಮ ಪ್ರಾಚೀನ ಗುರುಗಳಲ್ಲಿ ಮೊದಲಿಗರು. ಆದ್ದರಿಂದಲೇ ವ್ಯಾಸ ಪೂರ್ಣಿಮೆಯ ಈ ದಿನವನ್ನು ಗುರು ಪೂರ್ಣಿಮೆಯಾಗಿ ಆಚರಿಸಲಾಗುತ್ತದೆ. ಅಂತಹ ಶ್ರೇಷ್ಠ ಗುರುಗಳಾದ ವ್ಯಾಸ ಮಹರ್ಷಿಗಳಿಗೆ, ಆ ಮೂಲಕ ಜಗತ್ತಿನ ಎಲ್ಲಾ ಗುರುಗಳಿಗೆ ಶಿಕ್ಷಕ ಸಮಾಚಾರ ಹೃದಯಪೂರ್ವಕವಾಗಿ ವಂದಿಸುತ್ತದೆ. ಗುರು ಪೂರ್ಣಿಮೆಯ ಈ ದಿನದಂದು ಎಲ್ಲಾ ಶ್ರೇಷ್ಠ ಗುರುಗಳನ್ನು ನಾವು ಸ್ಮರಿಸೋಣ.

ದೇಶಕ್ಕಾಗಿ ತ್ಯಾಗ ಮಾಡಿದ ದೇಶಭಕ್ತ ಬಾಲಗಂಗಾಧರ ತಿಲಕರು ಸ್ಮರಣೀಯರು. ತಿಲಕರು ಮೂಲತಃ ಶಿಕ್ಷಕರಾಗಿದ್ದರು. ಶಿಕ್ಷಕರಾದ ನಾವೆಲ್ಲರೂ ಅವರ ಜಯಂತಿಯ ದಿನದಂದು ತಿಲಕರನ್ನು ಪ್ರಾಂಜಲ ಮನಸ್ಸಿನಿಂದ ನೆನೆಯೋಣ. ನಮ್ಮ ವಿದ್ಯಾರ್ಥಿಗಳಿಗೂ ತಿಲಕರ ಆದರ್ಶಗಳನ್ನು ನೆನೆಸೋಣ.

ಸಂಪಾದಕ

# ವಿವೇಕವಾಣಿ




ಮನುಷ್ಯನ ಅಂತಃರಂಗದಲ್ಲೊಂದು ಚೈತನ್ಯ ಇದೆ. ಅದು ಜ್ವಾಲಾಮುಖಿಗಿಂತಲೂ ಅಥವಾ ಪ್ರಕೃತಿಯ ಮತ್ತಾವುದೇ ಶಕ್ತಿಗಿಂತಲೂ ಕೋಟಿಪಾಲು ಅಧಿಕ ಶಕ್ತಿಶಾಲಿಯಾದುದು. ಮಾನವನೊಳಗಣ ಈ ಚೈತನ್ಯವು ಪ್ರಕೃತಿ ಶಕ್ತಿಯನ್ನೂ ಪ್ರಕೃತಿ ನಿಯಮಗಳನ್ನೂ ಮೆಟ್ಟಿ ನಿಲ್ಲುತ್ತದೆ. ಮಾತ್ರವಲ್ಲ, ಮಾನವನು ನಿಜವಾಗಿಯೂ ಯಾರು ಎಂಬುದನ್ನು ಅವನಿಗೆ ಕಲಿಸುತ್ತದೆ.

# ಪರಿವಿಡಿ


- ರಾಜ್ಯಕಾರ್ಯಕಾರಿ ಸಮಿತಿ 3
- 28 ನೇ ಪ್ರತಿಭಾ ಪುರಸ್ಕಾರ 4
- ನಿಜವಾದ ಮಿತ್ರರನ್ನು ಪಡೆಯಿರಿ 5
- ನಿರಂತರ ಹಾಗೂ ವ್ಯಾಪಕ ಮೌಲ್ಯಮಾಪನ 6
- ಪರಿಸರ ವ್ಯಕ್ತಿ ಜಿ.ಡಿ ಅಗರ್ವಾಲ್ 8
- ಸಮರ್ಪಣೆ –9 ರ ಮಗ್ಗಿಯೇ ಆದರ್ಶ ! 9
- ಪ್ರಾಥಮಿಕ ಶಾಲಾ ಹಂತದಲ್ಲಿ ಇಂಗ್ಲೀಷ್ ಭಾಷಾ ಬೋಧನೆ 10

# ಕರ್ನಾಟಕ ರಾಜ್ಯ ಮಾಧ್ಯಮಿಕ ಶಿಕ್ಷಕ ಸಂಘ

# 2013-16 ನೇ ಸಾಲಿಗೆ ರಾಜ್ಯಕಾರ್ಯಕಾರಿ ಸಮಿತಿ

ಕರ್ನಾಟಕ ರಾಜ್ಯ ಮಾಧ್ಯಮಿಕ ಶಿಕ್ಷಕ ಸಂಘದ ಸರ್ವಸದಸ್ಯರ ಸಭೆಯು ದಿನಾಂಕ: 23-06-2013, ಭಾನುವಾರದಂದು, ಬೆಳಿಗ್ಗೆ 9 ಗಂಟೆಗೆ ಸಂಘದ ಕೇಂದ್ರ ಕಛೇರಿ 'ಯಾದವಸ್ಮೃತಿ' ಶೇಷಾದ್ರಿಪುರಂ, ಬೆಂಗಳೂರು ಇಲ್ಲಿ ನಡೆಯಿತು. ಈ ಸಭೆಯಲ್ಲಿ ಸಂಘದ ಸಂವಿಧಾನಕ್ಕೆ ಅನುಗುಣವಾಗಿ 2013-16ನೇ ಸಾಲಿಗೆ ಈ ಕೆಳಕಂಡವರು ಪದಾಧಿಕಾರಿಗಳಾಗಿ ಚುನಾಯಿತರಾಗಿದ್ದಾರೆ.

ರಾಜ್ಯ ಅಧ್ಯಕ್ಷ :
ಶ್ರೀ **ಕೆ. ಬಾಲಕೃಷ್ಣ ಭಟ್,** ಸುರತ್ಕಲ್, ಮಂಗಳೂರು.

ರಾಜ್ಯ ಕಾರ್ಯಾಧ್ಯಕ್ಷ :
ಶ್ರೀ **ಅರುಣ್ ಶಹಾಪುರ,** MLC ಸಿಂದಗಿ, ಬಿಜಾಪುರ.

ರಾಜ್ಯ ಉಪಾಧ್ಯಕ್ಷರು :
ಶ್ರೀ **ಎಂ. ನಾಗರಾಜು,** ಮೈಸೂರು.
ಶ್ರೀ**ಮತಿ ಎಂ. ಎಸ್. ಮಂಜುಳಾದೇವಿ,** ಬೆಂಗಳೂರು.
ಶ್ರೀ **ಆರ್. ಕೊಟ್ರಪ್ಪ,** ಹಗರಿಬೊಮ್ಮನಹಳ್ಳಿ, ಬಳ್ಳಾರಿ.
ಶ್ರೀ **ಅಶೋಕ ಸಿಂತ್ರೆ,** ಬೆಳಗಾವಿ.

ರಾಜ್ಯ ಪ್ರಧಾನ ಕಾರ್ಯದರ್ಶಿ :
ಶ್ರೀ **ಶಿವಾನಂದ ಸಿಂಧನಕೇರಾ,** ಮೈಸೂರು.

ರಾಜ್ಯ ಸಹ ಪ್ರಧಾನ ಕಾರ್ಯದರ್ಶಿ :
ಶ್ರೀ **ಚಿದಾನಂದ ಪಾಟೀಲ,** ಕನಕಪುರ, ಬೆಂಗಳೂರು.

ರಾಜ್ಯ ಕಾರ್ಯದರ್ಶಿ :
ಶ್ರೀ **ಬಿ.ಎಂ.ಎಸ್. ವೃಷಭೇಂದ್ರ ಸ್ವಾಮಿ,** ಚಿತ್ರದುರ್ಗ.
ಶ್ರೀ **ರಾಜಮ್ಮ ಹಿಚ್ಕಡ,** ಭಟ್ಕಳ, ಕಾರವಾರ.
ಶ್ರೀ **ಜಿ. ನಂಜುಡಸ್ವಾಮಿ,** ಮೈಸೂರು.
ಶ್ರೀ **ರಾಜರಾಮ ಕುಡತರಕರ,** ಬೆಳಬಾವಿ.

ರಾಜ್ಯ ಖಜಾಂಚಿ :
ಶ್ರೀ **ಜೆ.ಎಂ. ಜೋಷಿ,** ಬೆಂಗಳೂರು.

ಆಂತರಿಕ ಲೆಕ್ಕ ಪರಿಶೋಧಕರು :
ಶ್ರೀ **ಎಸ್. ನಾಗರಾಜು,** ಬೆಂಗಳೂರು.

ರಾಜ್ಯ ಕಾರ್ಯಕಾರಿ ಸಮಿತಿ ಸದಸ್ಯರು :
ಶ್ರೀ **ಬಿ. ಹೆಚ್. ವರದರಾಜು,** ಬೆಂಗಳೂರು.
ಶ್ರೀ **ವಿಶ್ವೇಶ್ವರ ಭಟ್,** ಮಂಗಳೂರು.
**ರಾಜಶೇಖರ ಮಂಗಲಗಿ,** ಬೀದರ್
ಶ್ರೀ **ಜಿ.ಕೆ. ತಳವಾರ,** ಬಾಗಲಕೋಟೆ
ಶ್ರೀ **ಕೃಷ್ಣಮೂರ್ತಿ ಶ್ರೇಷ್ಠಿ,** ಹರಿಹರ,
ಶ್ರೀ **ಮನೋಜ ಕಟಗೇರಿ,** ಬಿಜಾಪುರ.
ಶ್ರೀ **ಗಂಗಾಧರ,** ಬೆಂಗಳೂರು.
ಶ್ರೀ **ವೆಂಕಟೇಶ್ ಕೇರಿ,** ಬಾಗಲಕೋಟೆ
ಶ್ರೀ **ಅಶೋಕ್ ಚಿಮ್ಮಲ**

ರಾಜ್ಯ ಮಹಿಳಾ ವಿಭಾಗ :
ಶ್ರೀ**ಮತಿ ಆರ್.** ಸೀತಾಲಕ್ಷ್ಮಿ, ಬೆಂಗಳೂರು.

ರಾಜ್ಯ ಶೈಕ್ಷಣಿಕ ವಿಭಾಗ :
ಶ್ರೀ**ಮತಿ ಬಿ.ಕೆ. ವರಲಕ್ಷ್ಮಿ,** ಬೆಂಗಳೂರು.
ಶ್ರೀ **ಬಸವರಾಜ,** ಬೆಂಗಳೂರು.

ಶಿಕ್ಷಕ ಸಮಾಚಾರ :
ಶ್ರೀ **ಎನ್. ನಾಗರಾಜ,** ಬೆಂಗಳೂರು.

ಪ್ರಾಂತ ಕಾರ್ಯಾಲಯ ಪ್ರಮುಖ :
ಶ್ರೀ **ಜಿ.ಎಸ್. ಕೃಷ್ಣಮೂರ್ತಿ,** ಬೆಂಗಳೂರು.

ಸಹ ಪ್ರಮುಖ :
ಶ್ರೀ **ಪಿ.ಸಿ. ಶಿವಶಂಕರಯ್ಯ,** ಬೆಂಗಳೂರು.

ಪೋಷಕರು : ಶ್ರೀ **ಕೃ. ನರಹರಿ**
ಶ್ರೀ **ಹೆಚ್. ನಾಗಭೂಷಣರಾವ್**

ವಿಭಾಗ ಪ್ರಮುಖರು :

| | |
|---|---|
| ಗುಲ್ಬರ್ಗಾ : | ಶ್ರೀ **ಮಹೇಶ ಬಸರಕೋಡ** |
| | ಶ್ರೀ **ಗುಂಡಾಚಾರ್** |
| ಧಾರವಾಡ : | ಶ್ರೀ **ಸಂದೀಪ್ ಬೂದಿಹಾಳ** |
| ಬೆಳಗಾವಿ : | ಶ್ರೀ **ಪ್ರಕಾಶ್ ಮಸಬಿನಾಳ** |
| ಮಂಗಳೂರು : | ಶ್ರೀ **ಎಸ್.ಡಿ. ಶಿವರಾಂ** |
| ತುಮಕೂರು : | ಶ್ರೀ **ಕೃಷ್ಣಮೂರ್ತಿ ಶ್ರೇಷ್ಠಿ** |
| | ಶ್ರೀ **ಬಿ. ಎನ್. ಎಂ. ಸ್ವಾಮಿ** |
| ಬೆಂಗಳೂರು | ಶ್ರೀ **ಬಿ.ಹೆಚ್. ವರದರಾಜು** |
| | ಶ್ರೀ **ಸಿ. ಪುಟ್ಟಸ್ವಾಮಿ** |
| ಮೈಸೂರು : | ಶ್ರೀ **ಜಿ. ನಂಜುಂಡಸ್ವಾಮಿ** |

# ಉತ್ತರ ಜಿಲ್ಲೆ – 28 ನೇ ಪ್ರತಿಭಾ ಪುರಸ್ಕಾರ

ಇದೇ ಜುಲೈ 7 ರ ಭಾನವಾರದಂದು ಬೆಂಗಳೂರು ಉತ್ತರ ಜಿಲ್ಲೆಯ 28ನೇ 'ಪ್ರತಿಭಾ ಪುರಸ್ಕಾರ' ಕಾರ್ಯಕ್ರಮ ನಗರದ ಮಧ್ಯ ಭಾಗದಲ್ಲಿರುವ 'ಶಿಕ್ಷಕ ಭವನ' ದಲ್ಲಿ ನಡೆಯಿತು. ಇತ್ತೀಚಿನ ಎಸ್.ಎಸ್.ಎಲ್.ಸಿ. ಪರೀಕ್ಷೆಯಲ್ಲಿ ಅತ್ಯಧಿಕ ಅಂಕಗಳಿಸಿದ ನೂರಾರು ಶಾಲಾ ಪ್ರಥಮಿಗರು ಈ ಸಮಾರಂಭದಲ್ಲಿ ಸನ್ಮಾನಿಸಲ್ಪಟ್ಟರು.

ಕಾರ್ಯಕ್ರಮದ ಮುಖ್ಯ ಅತಿಥಿಗಳಾಗಿ ಆಗಮಿಸಿದ್ದ ಖ್ಯಾತ ಇಂಜಿನಿಯರ್ ಹಾಗೂ ಶೇಷಾದ್ರಿಪುರಂ ಶಿಕ್ಷಣ ಸಂಸ್ಥೆಗಳ ಪ್ರಧಾನ ಕಾರ್ಯದರ್ಶಿ ಡಾ. ವೂಡೇ ಪಿ. ಕೃಷ್ಣರವರು ವಿದ್ಯಾರ್ಥಿ, ಪೋಷಕರನ್ನು ಕುರಿತು "ವಿದ್ಯಾರ್ಥಿಗಳು ಜ್ಞಾನಾರ್ಜನೆಯೊಂದಿಗೇ ಮೌಲ್ಯಾರ್ಜನೆಯನ್ನು ಮಾಡಬೇಕು. ಕೇವಲ ಇಂಜನಿಯರ್, ಡಾಕ್ಟರ್ ಆಗುವುದೇ ಜೀವನದ ಗುರಿಯಾಗಬಾರದು. ನಾವು ಸಮಾಜದಿಂದ ಪಡೆದು ಕೊಂಡಿದ್ದನ್ನು ಸಮಾಜಕ್ಕೆ ಹಿಂದಿರುಗಿಸಿಕೊಡುವ ಮನೋಭಾವವನ್ನು ಬೆಳೆಸಿ ಕೊಳ್ಳಬೇಕು. ಇಂದು ವಿವೇಕಾನಂದರ ಆದರ್ಶವಾದ 'Man making and Nation building' ಶಿಕ್ಷಣವು ನಮ್ಮ ಯುವಜನಕ್ಕೆ ಸಿಗುತ್ತಿಲ್ಲ. ರಾಮಕೃಷ್ಣ ಮಿಷನ್‌ನ ಅಧ್ಯಕ್ಷರಾಗಿದ್ದ ಸ್ವಾಮಿ ರಂಗನಾಥಾನಂದರು ನಮ್ಮ ಭಾರತದ ಪ್ರಬಲಶಕ್ತಿ ಆಧ್ಯಾತ್ಮಿಕತೆ. "In the name of secularism our students are bereft of moral and spiritual education" ಎಂದಿದ್ದಾರೆ. ಆದ್ದರಿಂದ ನಮ್ಮ ಜೀವನದಲ್ಲಿ ಆದರ್ಶವೊಂದಿರಲಿ. ಕೇವಲ ಹಣಮಾಡುವ ಯಂತ್ರವಾಗುವುದು ಬೇಡ" ಎಂದು ವಿದ್ಯಾರ್ಥಿಗಳಿಗೆ ಕಿವಿಮಾತು ಹೇಳಿದರು.

ಮತ್ತೋರ್ವ ಅತಿಥಿಗಳಾಗಿದ್ದ, ಖ್ಯಾತ ಉದ್ಯಮಿ ಜೆವಿಎಸ್ ಎಲೆಕ್ಟ್ರಾನಿಕ್ಸ್‌ನ ಮುಖ್ಯಸ್ಥರಾದ ಶ್ರೀ ಎಂ.ವಿ ಸತ್ಯನಾರಾಯಣ ಅವರು "ಇದೊಂದು ಅಪೂರ್ವವಾದ ಕಾರ್ಯಕ್ರಮ ವಿದ್ಯಾರ್ಥಿಗಳಿಗೆ ಹಾಗೂ ಪೋಷಕರಿಗೆ ಸಾರ್ಥಕವಾದ ದಿನವಾಗಿದೆ. ಅಧ್ಯಾಪಕರು ಸಮಾಜ ಮುಖಿಯಾಗಿ ಇಂಥ ಅರ್ಥಪೂರ್ಣ ಸಮಾರಂಭ ನಡೆಸುತ್ತಿರುವುದು. ಶ್ಲಾಘನೀಯ. ಶ್ರದ್ಧೆಯಿಂದ ಎಲ್ಲವನ್ನೂ ಸಾಧಿಸಬಹುದು ಎಂದು, ಶಾಸ್ತ್ರಗಳಲ್ಲಿ ಹೇಳಿದೆ. ನೀವೆಲ್ಲರೂ ಶ್ರಮಪಟ್ಟಿರುವುದಕ್ಕೆ ಎಂಥಾ ಪ್ರತಿಫಲ ಸಿಗುತ್ತದೆ ಎನ್ನುವುದಕ್ಕೆ ಈ ಸಮಾರಂಭವೇ ಸಾಕ್ಷಿ. ಕುಟುಂಬದಲ್ಲಿ ನಾವುಗಳು ಎಲ್ಲರೊಡನೆಯೂ ಉತ್ತಮವಾದ ಬಾಂಧವ್ಯವನ್ನು ಬೆಳೆಸಿಕೊಳ್ಳೋಣ. ನಮ್ಮ ಸನಾತನ ಧರ್ಮದ ಸಂದೇಶ **'ಸ್ವಂತಕ್ಕೆ ಸ್ವಲ್ಪ ಸಮಾಜಕ್ಕೆ ಸರ್ವಸ್ವ.'** ಇದನ್ನು ನಮ್ಮ ಜೀವನದಲ್ಲಿ ಅಳವಡಿಸುಕೊಂಡು ಸದ್ಗುಣಶಾಲಿಗಳಾಗಿ ಮನುಷ್ಯತ್ವವನ್ನು ಬೆಳೆಸಿಕೊಳ್ಳೋಣ. ದಾನಮಾಡುವ ಬುದ್ಧಿ ನಮ್ಮೆಲ್ಲರಲ್ಲಿ ಬರಲಿ. ವಿದ್ಯೆ ಎಂಬುದು ಒಂದು ತಪಸ್ಸು. ಅದನ್ನು ದಿನನಿತ್ಯ ಆಚರಿಸೋಣ. ಭಗವದ್ಗೀತೆಯಲ್ಲಿ ಶ್ರೀ ಕೃಷ್ಣನು ಶರೀರ, ಮಾತು, ಮನಸ್ಸುಗಳನ್ನು ಶುದ್ಧವಾಗಿ ಇಟ್ಟುಕೊಳ್ಳುವ ಬಗ್ಗೆ ತಿಳಿಸಿದ್ದಾನೆ. ಅದರಂತೆ ನಮ್ಮ ಶರೀರ ಮನಬುದ್ಧಿಗಳನ್ನು ಶುದ್ಧವಾಗಿಟ್ಟುಕೊಂಡು ಸಮಾಜಕ್ಕೆ ಪೋಷಕವಾಗಿ ಬದುಕೋಣ" ಎಂದು ನುಡಿದರು.

ವೆಂಕಟ್ ಇಂಟರ್ ನ್ಯಾಷನಲ್ ವಿದ್ಯಾಸಂಸ್ಥೆಗಳ ಮುಖ್ಯಸ್ಥರಾದ ಶ್ರೀ ಬಾಲಕೃಷ್ಣರವರು ಮಾತನಾಡುತ್ತಾ 'ಅಬ್ದುಲ್ ಕಲಾಂ ಹೇಳಿದಂತೆ ನಮ್ಮ ಜೀವನಕ್ಕೊಂದು ಗುರಿ ಇರಬೇಕು. ಹಣ ನಮಗೆ ಬೇಕೆ ಬೇಕು ಆದರೆ ಮಾನವೀಯತೆ ಇಲ್ಲದೆ ಸಂಪಾದಿಸುವ ಹಣ ಪಾಪದ ಹಣ. ನಾವೆಲ್ಲ ಶ್ರಮಪಟ್ಟು ಸಂಪಾದಿಸೋಣ. ಸಮಾಜಮುಖಿಯಾಗಿ ಬದುಕೋಣ' ಎಂದು ಮಕ್ಕಳಿಗೆ ಹಿತವಚನ ನುಡಿದರು. ಅವರು ಉತ್ತರಾಖಂಡದಲ್ಲಿನ ನೆರೆಸಂತ್ರಸ್ತರಿಗೆ 4000ರೂ. ಗಳನ್ನು ಕೊಡುಗೆಯಾಗಿ ನೀಡಿದ್ದಲ್ಲದೆ 20 ಜನ ಸರ್ಕಾರೀ ಶಾಲೆಯ ಮಕ್ಕಳಿಗೆ ಮುಂದಿನ ವಿದ್ಯಾಭ್ಯಾಸಕ್ಕೆ ಅನುವಾಗಲು ತಲಾ 5000 ರೂ. ಗಳ ಸಹಾಯಧನವನ್ನು ಘೋಷಿಸಿದರು.

ಸಂಘದ ಪ್ರಧಾನ ಕಾರ್ಯದರ್ಶಿ ಶಿವಾನಂದ, ಪ್ರತಿಜ್ಞೆ ಬೋಧಿಸಿದರು. ಅಧ್ಯಕ್ಷರಾದ ಕೆ. ಬಾಲಕೃಷ್ಣ ಭಟ್ ಸಮಾರಂಭದ ಅಧ್ಯಕ್ಷತೆ ವಹಿಸಿದ್ದರು. ಮಹಾಪೋಷಕರಾದ ಪ್ರೊ. ಕೃ. ನರಹರಿ ಅವರು ವಿದ್ಯಾರ್ಥಿಗಳನ್ನು ಸನ್ಮಾಸಿದರು. ಉತ್ತರ ಜಿಲ್ಲಾ ಅಧ್ಯಕ್ಷರಾದ ಸುಗೂರು ತಿಪ್ಪೇಸ್ವಾಮಿಯವರು ಎಲ್ಲರಿಗೂ ಆಭಾರ ಮನ್ನಿಸಿದರು. ಪ್ರಾರಂಭದಲ್ಲಿ ಜಿಲ್ಲಾ ಕಾರ್ಯದರ್ಶಿಗಳಾದ ಶ್ರೀ ತಾಂಬೆಯವರು ಸಭೆಗೆ ಸ್ವಾಗತಿಸಿದರು. ಶಿಕ್ಷಕ ಸಂಘದ ಪೋಷಕರಾದ ಶ್ರೀ ಹೆಚ್. ನಾಗಭೂಷಣ್ ರಾವ್ ಅವರು, ಉತ್ತರಾಖಂಡದ ನೆರೆಯ ಬಗ್ಗೆ ವಿವರಿಸಿ, ಸಭೆಗೆ ಒಂದು ನಿಮಿಷ ಮೌನದ ಮೂಲಕ ಶ್ರದ್ಧಾಂಜಲಿ ಸಮರ್ಪಿಸಲು ಕೋರಿ, ದನಸಹಾಯ ಮಾಡಲು ನಿವೇದಿಸಿಕೊಂಡರು. ಸಭೆಯ ಅಂತ್ಯದಲ್ಲಿ ಎಂಟು ಸಾವಿರ ರೂಗಳು ಸಂಗ್ರಹಿಸಲಾಗಿದ್ದನ್ನು ಘೋಷಿಸಲಾಯಿತು. ಅದನ್ನು ರಾ.ಸ್ವ.ಸೇ ಸಂಘ ಸಂಚಾಲಿತ ನೆರೆ ಪರಿಹಾರನಿಧಿಗೆ ಕೂಡಲೇ ತಲುಪಿಯೂ ಆಯಿತು.

**ವರದಿ : ಎಚ್ಚೆನ್ನಾರ್**

# ನಿಜವಾದ ಮಿತ್ರರನ್ನು ಪಡೆಯಿರಿ ನೀವೂ ನಿಜವಾದ ಮಿತ್ರರಾಗಿ...

■ ನ್ಯಾ. ಡಾ. ಮಾ. ರಾಮಾಜೋಯಿಸ್

**ಆಪತ್ಕಾಲೇ ತು ಸಂಪ್ರಾಪ್ತೇ ಯನ್ಮಿತ್ರಂ ಮಿತ್ರ ಮೇವ ತತ್ ।**
**ವೃದ್ಧಿಕಾಲೇ ತು ಸಂಪ್ರಾಪ್ತೇ ದುರ್ಜನೋಪಿ ಸಹೃದ್ಭೇತ್॥**

ಕಷ್ಟ ಕಾಲ ಒದಗಿದಾಗ ಯಾರು ಸ್ನೇಹಿತನಾಗಿರುವನೋ ಅವನೇ ನಿಜವಾದ ಮಿತ್ರ. ಏಳಿಗೆಯ ಕಾಲ ಬಂದಾಗ ಕೆಟ್ಟವನೂ ಸಹ ಸ್ನೇಹಿತನಾಗುವನು. (ಪಂಚತಂತ್ರ, ಮಿತ್ರ ಸಂಪ್ರಾಪ್ತಿ–118).

ಆವಶ್ಯಕತೆ ಇದ್ದಾಗ, ಅಂದರೆ ಕಷ್ಟದಲ್ಲಿದ್ದಾಗ ಯಾರು ಸಹಾಯ ಮಾಡುತ್ತರೋ ಅವರೇ ನಿಜವಾದ ಸ್ನೇಹಿತರು. ದುಡ್ಡಿದ್ದಾಗ ಬಂದು ಮುತ್ತಿಕೊಳ್ಳುವವರು ನಿಜವಾದ ಸ್ನೇಹಿತರಲ್ಲ ಎಂಬುದೇ ಈ ಶ್ಲೋಕದ ಅರ್ಥ.

ಯಾರು ನಿಜವಾಗಿಯೂ ಮಿತ್ರರು ? ಕಷ್ಟದಲ್ಲಿದ್ದಾಗ ದೂರವಿದ್ದು, ಐಶ್ವರ್ಯ, ಅಧಿಕಾರ ಬಂದಾಗ ಬೆಲ್ಲಕ್ಕೆ ನೊಣ ಮುತ್ತುವಂತೆ ಹತ್ತಿರ ಬರುವವರನ್ನು ನಂಬಬೇಡಿ. ಇದು ತುಂಬಾ ಅನುಭವದ ಮಾತು. ಕಷ್ಟವಿದ್ದಾಗ ಯಾರನ್ನಾದರೂ ನೋಡಲು ಹೋದರೆ, ನಾವೇ ಏನನ್ನಾದರೂ ಖರ್ಚು ಮಾಡಬೇಕಾಗಬಹುದು. ಆದರೂ, ಆಗ ಮಿತ್ರನೊಬ್ಬನಿಗೆ ಸಹಾಯ ಮಾಡಿದ ಧನ್ಯತೆಯ ಭಾವನೆ ಉಂಟಾಗುತ್ತದೆ. ಇಂಥವರು ವಿರಳ. ಆದರೆ ಯಾರಿಗಾದರೂ ಅಕಸ್ಮಾತ್ತಾಗಿ ಲಾಟರಿಯಲ್ಲಿ ಭಾರೀ ಹಣ ಬಂದಾಗ, ಬಹಳ ಹತ್ತಿರದ ಸ್ನೇಹ, ಸಂಬಂಧ ಅಥವಾ ನೆಂಟಸ್ತನ ಹೇಳಿಕೊಂಡು ಬರುವವರು ಬಹಳ. ಆದ್ದರಿಂದ ನಿಜವಾದ ಮಿತ್ರರಾಗಿ.

ಈ ಶ್ಲೋಕದ ಇನ್ನೊಂದು ಅರ್ಥವೆಂದರೆ, ಪ್ರತಿಯೊಬ್ಬನೂ ತನ್ನ ನೆಂಟರಿಷ್ಟರಿಗೆ, ಬಂಧು–ಬಳಗದವರಿಗೆ ಕಷ್ಟ ಬಂದದ್ದು ತಿಳಿಯುತ್ತಿದ್ದಂತೆ, ಅವರು ಕೇಳದಿದ್ದರೂ ತಾವಾಗಿ ಸಹಾಯ ಮಾಡಿ, ಅವರ ದುಃಖವನ್ನು ನೀವೂ ಹಂಚಿಕೊಂಡು ಅವರಿಗೆ ಸ್ವಲ್ಪ ಸಮಾಧಾನ ತನ್ನಿ ಎಂಬ ಸಲಹೆ ಇದೆ. ಅಂದರೆ, ಇತರರಿಗೆ ಕಷ್ಟ ಬಂದಾಗ ಸಹಾಯ ಮಾಡಿ. ಇನ್ನೊಬ್ಬರಿಗೆ ಭಾರೀ ಲಾಭ ಉಂಟಾದಾಗ ಅದರಲ್ಲಿ ಸ್ವಲ್ಪ ಪಡೆಯುವ ಪ್ರವೃತ್ತಿ ಒಳ್ಳೆಯದಲ್ಲ ಎಂಬ ಮಾರ್ಗದರ್ಶನವೂ ಇಲ್ಲಿದೆ.

**ಕೇನಾಮೃತಮಿದಂ ಸೃಷ್ಟಂ ಮಿತ್ರ ಮಿತ್ಯಕ್ಷರದ್ವಯಂ ।**
**ಆಪದಾಂ ಚ ಪರಿತ್ರಾಣಂ ಶೋಕಸಂತಾಪಭೇಷಜಂ ॥**

ಅಮೃತಪ್ರಾಯವಾದುದೂ, ಕಷ್ಟಗಳಿಂದ ಕಾಪಾಡುವುದೂ, ದುಃಖ ಸಂತಾಪ ಇವುಗಳಿಗೆ ಔಷಧಿಯಾದುದೂ ಆದ "ಮಿತ್ರ" ಎಂಬ ಈ ಎರಡು ಅಕ್ಷರವನ್ನು ಯಾರು ಸೃಷ್ಟಿ ಮಾಡಿದರೋ ! (ಪಂಚತಂತ್ರ, ಮಿತ್ರ ಸಂಪ್ರಾಪ್ತಿ–62).

ಸ್ನೇಹಿತನ ಪಾತ್ರ ಬಲು ದೊಡ್ಡದು ಮತ್ತು ಉಪಯುಕ್ತ ಆದುದರಿಂದ ಸ್ನೇಹಿತರನ್ನು ಸಂಪಾದಿಸಿ.

ಇದರ ತಾತ್ಪರ್ಯ, ಯಾರು ನಿಜವಾದ ಮಿತ್ರರು ಎಂಬುದರ ಜೊತೆಗೆ ನೀವು ಇತರರಿಗೆ ಅಂತಹ ಮಿತ್ರರಾಗಿ ಎಂಬ ಸೂಚನೆಯೂ ಇದೆ. ನೀವು ಹಾಗಾದಲ್ಲಿ ಜೀವನದಲ್ಲಿ ಸುಃಖ–ಶಾಂತಿ ಪಡೆಯುತ್ತೀರಿ. ಬೇರೆಯವರು ನಿಮ್ಮನ್ನು ಅಂತಹ ಮಿತ್ರನೆಂಬುದನ್ನು ಕಂಡಾಗ ನಿಮಗಾಗುವ ಆನಂದ ಅಪಾರ.

**ಅವಶ್ಯಮೇವ ಭೋಕ್ತವ್ಯಂ ಕೃತಂ ಕರ್ಮ ಶುಭಾಶುಭಂ ।**
**ನಾಭುಕ್ತಂ ಕ್ಷೀಯತೇ ಕರ್ಮ ಕಲ್ಪಕೋಟಿಶತರೈರಪಿ ॥**

ಮಾಡಿದ ಒಳ್ಳೆಯ ಅಥವಾ ಕೆಟ್ಟ ಕರ್ಮಗಳ ಫಲವನ್ನು ಖಂಡಿತಾ ಅನುಭವಿಸಬೇಕು. ಎಷ್ಟೇ ಕಾಲ ಕಳೆದರೂ ಕರ್ಮದ ಫಲ ಅನುಭವಿಸಲೇಬೇಕಾಗುತ್ತದೆ. (ಗರುಡ ಪುರಾಣ, 5–56).

ಪರೋಪಕಾರದಂತಹ ಒಳ್ಳೆಯ ಕೆಲಸ ಮತ್ತೊಂದಿಲ್ಲ. ನಾನಾ ರೀತಿಯ ಕಷ್ಟದಲ್ಲಿರುವವರಿಗೆ ಬೇಕಾದ ಸಹಾಯ, ಸತ್ಪಾತ್ರರಿಗೆ ಹಣ ದಾನ, ವಿದ್ಯಾರ್ಥಿಗಳಿಗೆ ಅನ್ನದಾನ ಇತ್ಯಾದಿ ಪುಣ್ಯದ ಕೆಲಸ ಮಾಡಿದವರಿಗೆ ತಕ್ಷಣಕ್ಕೆ ಸಂತೋಷ ದೊರೆಯುತ್ತದೆ. ಅಲ್ಲದೆ ಒಂದಲ್ಲಾ ಒಂದು ದಿನ ಭವಿಷ್ಯದಲ್ಲಿ ಎಂದಾದರೂ ಒಳ್ಳೆಯ ಕರ್ಮಕ್ಕೆ ಒಳ್ಳೆಯ ಫಲವೂ ಸಿಕ್ಕೇ ಸಿಗುತ್ತದೆ. ಅದರಿಂದ ಆನಂದ, ಗೌರವ ಉಂಟಾಗುತ್ತದೆ. ಆದುದರಿಂದ ಪುಣ್ಯದ ಕೆಲಸ ಮಾಡಿ ಅದರ ಫಲ ಪಡೆಯಿರಿ. ಆದರೆ, ಕೆಟ್ಟ ಕೆಲಸ ಮಾಡಿದರೆ, ಒಂದಲ್ಲಾ ಒಂದು ದಿನ ಅದರ ಫಲ ಅಂದರೆ ಪಾಪದ ಫಲ ಅನುಭವಿಸಲೇ ಬೇಕಾಗುತ್ತದೆ.

●

# ನಿರಂತರ ಹಾಗೂ ವ್ಯಾಪಕ ಮೌಲ್ಯಮಾಪನ (CCE)

ಕಳೆದ ಸಂಚಿಕೆಯಿಂದ...

1. (SA-1) ಸಂಕಲನಾತ್ಮಕ ಮೌಲ್ಯಮಾಪನ –1 ; ಸೆಪ್ಟೆಂಬರ್ ಕೊನೆಯವಾರ

2. (SA-2) ಸಂಕಲನಾತ್ಮಕ ಮೌಲ್ಯಮಾಪನ – 2 ; ಮಾರ್ಚ್ ಕೊನೆಯವಾರ.

## ನಿರಂತರ ಹಾಗೂ ವ್ಯಾಪಕ ಮೌಲ್ಯಮಾಪನದ ಉದ್ದೇಶಗಳು

- ಪ್ರತಿ ವಿದ್ಯಾರ್ಥಿಯ ಸಾಧನೆಗಳನ್ನು ಸಮಗ್ರವಾಗಿ ಅಧ್ಯಯನ ಮಾಡಿ ಅವಲೋಕನಕ್ಕೆ ಒಳಪಡಿಸುವುದು.
- ಪ್ರತಿ ಸಾಮರ್ಥ್ಯದಲ್ಲಿಯೂ ವಿದ್ಯಾರ್ಥಿಯ ಸಾಧನೆಯನ್ನು ದಾಖಲಿಸುವುದು.
- ನಾವು ನಿರೀಕ್ಷಿಸಿರುವ ಹಾಗೂ ವಿದ್ಯಾರ್ಥಿಯು ಗಳಿಸಿರುವ ಕಲಿಕೆಯನ್ನು ವಿಶ್ಲೇಷಿಸುವುದು.
- ಅಂಕಗಳ ಬದಲಿಗೆ ಶ್ರೇಣಿ ನೀಡುವ ಮೂಲಕ ಪ್ರಗತಿಯನ್ನು ವ್ಯಕ್ತಪಡಿಸುವುದು.
- ಕಲಿಕೆಯನ್ನು ಖಾತ್ರಿ ಪಡಿಸಿಕೊಳ್ಳಲು ಸಮಯ, ಸಂದರ್ಭಗಳಿಗೆ ಬೇಕಾಗುವ ಹಿಮ್ಮಾಹಿತಿಯನ್ನು ಪಡೆದುಕೊಳ್ಳುವುದು.
- ಲೇಖನಿ, ಕಾಗದಗಳ ಮೂಲಕ ನಡೆಸುವ ಲಿಖಿತ ಪರೀಕ್ಷೆಗಳ ಒತ್ತಡವನ್ನು ಕಡಿಮೆ ಮಾಡುವುದು.
- ಸಾಧನ–ಸಲಕರಣೆಗಳು ಮತ್ತು ಅವಶ್ಯಕ ತಂತ್ರಗಳನ್ನು ಉಪಯೋಗಿಸಿ ಲಿಖಿತ, ಮೌಖಿಕ, ವೀಕ್ಷಣೆ, ಸಂದರ್ಶನ, ದರ್ಜಾಮಾಪನ, ಸಾಂದರ್ಭಿಕ ದಾಖಲೆ, ವೈಯಕ್ತಿಕ ಹಾಗೂ ಗುಂಪು ರಚನೆಯ ಮೂಲಕ ಕಲಿಕೆಯ ಪ್ರಗತಿಯನ್ನು ವಿವಿಧ ಆಯಾಮಗಳಲ್ಲಿ ಒರೆ ಹಚ್ಚುವುದು.
- ಪರೀಕ್ಷೆ ಎಂಬ ಭಯ ಮತ್ತು ಆತಂಕವನ್ನು ಹೋಗಲಾಡಿಸುವ ಮೂಲಕ ಕಲಿಕೆಯನ್ನು ಸರಾಗವಾಗಿ, ನಿರಾತಂಕವಾಗಿ ಅವಲೋಕನಕ್ಕೆ ಒಳಪಡಿಸುವುದು.
- ಸಹಪಠ್ಯ ಚಟುವಟಿಕೆಗಳ ಕ್ಷೇತ್ರವಾದ ಸಾ.ಉ.ಉ.ಕಾ, ಕಲೆ, ದೈಹಿಕ ಶಿಕ್ಷಣ ಮುಂತಾದವುಗಳಲ್ಲಿ ಮಕ್ಕಳ ತೊಡಗುವಿಕೆಯನ್ನು ದಾಖಲಿಸಿ ವಿಶ್ಲೇಷಿಸುವುದು.
- ವಿದ್ಯಾರ್ಥಿಯ ಬೆಳವಣಿಗೆ ಮತ್ತು ಅಭಿವೃದ್ಧಿಗೆ ಸಂಬಂಧಿಸಿದ ವೈಯಕ್ತಿಕ ದಾಖಲೆ, ಸಾಂದರ್ಭಿಕ ದಾಖಲೆ, ವ್ಯಕ್ತಿ ವೃತ್ತಾಂತ ದಾಖಲೆಗಳನ್ನು ಇಡುವುದು.
- ಮಗುವಿನ ಹಾಜರಾತಿ, ವೈಯಕ್ತಿಕ ಶುಚಿತ್ವ, ಕ್ರಮಬದ್ಧತೆ, ಜವಾಬ್ದಾರಿ, ಪ್ರಜಾಸತ್ತಾತ್ಮಕ ಮನೋಧೋರಣೆ, ಪರಿಸರ ಸಂರಕ್ಷಣೆ ಕಾಳಜಿ, ಕರ್ತವ್ಯ ಪ್ರಜ್ಞೆ, ಸ್ವಯಂ ನಿಯಂತ್ರಣ, ಭಾಗವಹಿಸುವಿಕೆ, ಸಹಕಾರ ಇತ್ಯಾದಿಗಳನ್ನು ಮೌಲ್ಯ ಮಾಪನ ಪರಿಧಿಯೊಳಕ್ಕೆ ತರುವುದು.
- ಮಗುವಿನ ಕಲಿಕೆಯ ಪ್ರಕ್ರಿಯೆಯ ನಿರಂತರ ವಿಶ್ಲೇಷಣೆಯಿಂದ ಕ್ಲಿಷ್ಟ ಕ್ಷೇತ್ರಗಳನ್ನು ಗುರುತಿಸಲು ಮತ್ತು ಪರಿಹಾರ ಕಂಡುಕೊಳ್ಳಲು ಸಹಾಯ ಮಾಡುವುದು.
- ಮಕ್ಕಳ ಪ್ರಗತಿಯ ಬಗ್ಗೆ ಪೋಷಕರು ಮತ್ತು ಸಮುದಾಯದ ಸದಸ್ಯರಿಗೆ ಆತ್ಮವಿಶ್ವಾಸ ಮೂಡಿಸುವಂತಹ ಹಿಮ್ಮಾಹಿತಿ ನೀಡುವುದು.
- ಮೌಲ್ಯಮಾಪನ ಪ್ರಕ್ರಿಯೆಯಿಂದ ಹೊರಬರುವ ಫಲಿತಗಳು ಧನಾತ್ಮಕ ಬದಲಾವಣೆಗೆ ಪೂರಕ ವಾಗುವಂತೆ ನೋಡಿಕೊಳ್ಳುವುದು.
- ವಿದ್ಯಾರ್ಥಿಗಳಲ್ಲಿ ಸ್ವ–ಮೌಲ್ಯಮಾಪನ ಮಾಡಿಕೊಳ್ಳುವ ಸಾಮರ್ಥ್ಯವನ್ನು ಅಭಿವೃದ್ಧಿಗೊಳಿಸುವುದು. ನಿಂತರ ಹಾಗೂ ವ್ಯಾಪಕ ಮೌಲ್ಯ ಮಾಪನದ ಉದ್ದೇಶಗಳಾಗಿವೆ.

## ಶಾಲೆಯಲ್ಲಿ ನಿರಂತರ ಹಾಗೂ ವ್ಯಾಪಕ ಮಾಪನವನ್ನು ಅಳವಡಿಸಿಕೊಳ್ಳುವುದರ ಪ್ರಾಮುಖ್ಯತೆ

- ನಿರಂತರ ಹಾಗೂ ವ್ಯಾಪಕ ಮೌಲ್ಯ ಮಾಪನದ ಅಳವಡಿಕೆಯಿಂದ ಪ್ರತಿಯೊಬ್ಬ ವಿದ್ಯಾರ್ಥಿಯ ಕಲಿಕೆಯ ಮಟ್ಟವನ್ನು ಅರ್ಥೈಸಿಕೊಳ್ಳಲು ಸಹಕಾರ.
- ಮಕ್ಕಳ ಪ್ರಗತಿಯನ್ನು ಗುರುತಿಸುವ ಸಲುವಾಗಿ ಸಾಧನಾ ಸಲಕರಣೆಗಳನ್ನು ರಚಿಸಿಕೊಳ್ಳಲು ಮತ್ತು ಅದನ್ನು ಪರಿಷ್ಕರಿಸಿಕೊಳ್ಳಲು ದಾರಿ ತೋರಿಸುತ್ತದೆ.
- ಕಾಲಕಾಲಕ್ಕೆ ಪೋಷಕರಿಗೆ ತಮ್ಮ ಮಕ್ಕಳ ಪ್ರಗತಿಯನ್ನು ಅರ್ಥೈಸಲು ಸಹಕಾರಿಯಾಗಿದೆ.
- ಶಿಕ್ಷಕರಿಗೆ ಬೋಧನೆಯ ಬಗ್ಗೆ ಹಿಮ್ಮಾಹಿತಿಯನ್ನು ನೀಡುತ್ತದೆ.

(7ನೇ ಪುಟಕ್ಕೆ.....)

6ನೇ ಪುಟದಿಂದ...

**ಮೌಲ್ಯಮಾಪನ**

- ವಿದ್ಯಾರ್ಥಿಗೆ ತನ್ನ ಕಲಿಕೆಯ ಬಗ್ಗೆ ಆತ್ಮವಿಶ್ವಾಸವನ್ನು ಮೂಡಿಸಲು ಹಾಗೂ ಅಪೇಕ್ಷಿತ ಬೆಳವಣಿಗೆಯ ಕಡೆಗೆ ಮಾರ್ಗದರ್ಶಿಸಲು ನೆರವಾಗುತ್ತದೆ.
- ಯಾವುದೇ ಭಯ ಆತಂಕಗಳಿಲ್ಲದೆ, ಸ್ವಚ್ಛಂದ ಪರಿಸರದಲ್ಲಿ ಮುಕ್ತವಾಗಿ ಕಲಿಕೆಯನ್ನು ಒರೆಹಚ್ಚಲು ಸಾಧ್ಯವಿದೆಯೆಂಬುದನ್ನು ಮನಗಾಣಿಸುತ್ತದೆ.

**ನಿರಂತರ ಹಾಗೂ ವ್ಯಾಪಲ ಮೌಲ್ಯ ಮಾಪನವನ್ನು ಶಾಲೆಗಳಲ್ಲಿ ಕೈಗೊಳ್ಳಲು ನಾವು ಈ ಕ್ರಮಗಳನ್ನು ಕೈಗೊಳ್ಳಬಹುದಾಗಿದೆ.**

- ಕಲಿಕಾ ಪ್ರಕ್ರಿಯೆಯಲ್ಲಿನ ಜ್ಞಾನ, ಗ್ರಹಿಕೆ, ಅಭಿವ್ಯಕ್ತಿ ಪ್ರಶಂಸೆ, ಅನ್ವಯ, ತಿಳುವಳಿಕೆ, ಮುಂತಾದ ಕೌಶಲದ ಅಂಶಗಳನ್ನು ಮೊದಲೇ ಗುರುತಿಸಿ ಅವುಗಳ ಕಲಿಕೆ ಮತ್ತು ಮೌಲ್ಯ ಮಾಪನಕ್ಕೆ ಹೆಚ್ಚಿನ ಆದ್ಯತೆ ನೀಡುವುದು.
- ಸಾಮರ್ಥ್ಯ ಅಥವಾ ಕಲಿಕಾಂಶಗಳನ್ನು ಪ್ರಭುತ್ವ ಮಟ್ಟದಲ್ಲಿ ಅಳೆಯುವ ಸಾಧನಗಳನ್ನು ತಯಾರಿಸಿಕೊಳ್ಳುವುದು.
- ಸಾಮರ್ಥ್ಯ ಅಥವಾ ಕಲಿಕಾಂಶದ ವ್ಯಾಪ್ತಿ, ಸ್ವರೂಪ ಗಳನ್ನು ಆಧರಿಸಿ ಕಲಿಕಾ ಪ್ರಕ್ರಿಯೆ ಮತ್ತು ಚಟುವಟಿಕೆಗಳನ್ನು ಅಳವಡಿಸಿಕೊಳ್ಳುವುದು.
- ವ್ಯಕ್ತಿತ್ವ, ಮನೋಧೋರಣೆ, ಆಸಕ್ತಿ, ದೈಹಿಕ ಬೆಳವಣಿಗೆ ಇತ್ಯಾದಿ ಕ್ಷೇತ್ರಗಳ ಬೆಳವಣಿಗೆಯನ್ನು ತಿಳಿಯುವ ಸೂಚಕಗಳನ್ನು ನಿರ್ಧರಿಸಿ ಅದರ ಆಧಾರದ ಮೇಲೆಯೇ ಮೌಲ್ಯಮಾಪನ ಮಾಡುವುದು.
- ನಿರಂತರವಾಗಿ ದಾಖಲೆಗಳನ್ನು ನಿರ್ವಹಿಸುವುದು.
- ಮೌಲ್ಯಮಾಪನದ ನಂತರ ಕಂಡುಬಂದ ಕೊರತೆಗಳನ್ನು ಪರಿಹರಿಸಲು ಪರಿಹಾರ ಕ್ರಮಗಳನ್ನು ನಿರಂತರವಾಗಿ ಕೈಗೊಳ್ಳುವುದು.
- ಮೇಲ್ನೋಟಕ್ಕೆ ಈ ಎಲ್ಲಾ ಪ್ರಕ್ರಿಯೆಗಳು ಶಿಕ್ಷಕರಿಗೆ ಹೊರೆ ಎನ್ನಿಸಬಹುದು. ಆದರೆ ನಿರಂತರ ಹಾಗೂ ವ್ಯಾಪಕ ಮೌಲ್ಯಮಾಪನ ಉದ್ದೇಶ, ಪ್ರಾಮುಖ್ಯತೆ ಹಾಗೂ ಅವಶ್ಯಕತೆಗಳನ್ನು ಅರಿತಾಗ ಇದು ನಮ್ಮ ಕರ್ತವ್ಯದ ಒಂದು ಭಾಗವನಿಸುತ್ತದೆ. ಇದನ್ನು ನಮ್ಮ ದೈನಂದಿನ ಕರ್ತವ್ಯಗಳ ಒಂದು ಭಾಗವಾಗಿ ಅಳವಡಿಸಿ ಕೊಳ್ಳಬೇಕಾಗಿದೆ. ನಮ್ಮ ಪವಿತ್ರವಾದ ವೃತ್ತಿಯ ಒಂದು ಭಾಗವಾಗಿಸಬೇಕಾಗಿದೆ.

## ಮಕ್ಕಳ ಪ್ರಗತಿಯನ್ನು ತಿಳಿಯಲು ಕೈಗೊಳ್ಳಬೇಕಾಗಿರುವ ಚಟುವಟಿಕೆಗಳು

**1. ಗುಂಪು ಚಟುವಟಿಕೆಗಳು**

- ಸಂಭಾಷಣೆ, ಸಂವಾದ, ನಾಟಕ, ಚರ್ಚೆ, ಉಕ್ತಲೇಖನ, ಲೆಕ್ಕಗಳನ್ನು ನೀಡುವುದು.

**2. ಗಮನಿಸುವುದು**

- ಸ್ವಚ್ಛತೆ, ಪ್ರಾಮಾಣಿಕತೆ, ಇತರರಿಗೆ ಸ್ಪಂದಿಸುವ ರೀತಿ, ಸ್ನೇಹಿತರೊಡನೆ ವರ್ತನೆ, ಶಿಕ್ಷಕರೊಡನೆ ವರ್ತನೆ, ಬಳಸುವ ಭಾಷೆ, ರೀತಿ...

**3. ಸಂದರ್ಶನ**

- ಕಥೆ ಹೇಳಿಸುವುದು, ಓದಿಸುವುದು, ಲೆಕ್ಕ ಮಾಡಿಸುವುದು, ಸಾಮಾನ್ಯ ಜ್ಞಾನ ಹೊಂದಿಸುವುದು, ಹೋಲಿಸುವುದು, ವ್ಯತ್ಯಾಸ ಗುರುತಿಸುವ ಚಟುವಟಿಕೆ ಮಾಡಿಸುವುದು.

**4. ದಾಖಲೆಗಳ ಪರಿಶೀಲನೆ**

- ಹಾಜರಾತಿ, ಮನೆಗೆಲಸ ಪುಸ್ತಕ, ನೋಟ್ಸ್, ಕೈ ಬರಹದ ಪುಸ್ತಕ, ಯೋಜನೆ.

## ನಿರಂತರ ಹಾಗೂ ವ್ಯಾಪಕ ಮೌಲ್ಯಮಾಪನದ ತಂತ್ರ ಹಾಗೂ ಸಾಧನಗಳು

ಇಲ್ಲಿಯವರೆಗೆ ನಾವು ವಿದ್ಯಾರ್ಥಿಗಳಿಗೆ ಲಿಖಿತ ಪರೀಕ್ಷೆಗಳನ್ನು ಕೆಲವು ವೇಳೆ ಮೌಖಿಕ ಪರೀಕ್ಷೆಗಳನ್ನು ನಡೆಸುತ್ತಿದ್ದೇವೆ. ಆದರೆ ನಿರಂತರ ಹಾಗೂ ವ್ಯಾಪಕ ಮೌಲ್ಯ ಮಾಪನದಲ್ಲಿ ವಿಭಿನ್ನವಾದ, ಹಲವು ವಿಧಾನಗಳನ್ನು ಅನುಸರಿಸಬೇಕಾಗಿದೆ.


ಅವಲೋಕನ, ವ್ಯಕ್ತಿ ವೃತ್ತಾಂತ ದಾಖಲೆ, ತಾಳೆ ಪಟ್ಟಿ ನಮೂನೆಗಳು, ದರ್ಜಾಮಾಪನ ನಮೂನೆಗಳು, ಸಂದರ್ಶನ, ಪ್ರಶ್ನಾವಳಿ, ಯೋಜನಾಕಾರ್ಯ, ಪ್ರಾಯೋಗಿಕ ವಿಧಾನ / ಕಾರ್ಯ ನಿರ್ವಹಣೆ, ಸಾಂದರ್ಭಿಕ ದಾಖಲೆ ಮುಂತಾದ ವಿಧಾನಗಳನ್ನು ಅನುಸರಿಸಬೇಕಾಗಿದೆ.

ವಿದ್ಯಾರ್ಥಿಯ ಬೆಳವಣಿಗೆಯ ಬಗ್ಗೆ ಮಾಹಿತಿ ಸಂಗ್ರಹಿಸುವ ಕಾರ್ಯಕ್ಕೆ ಈ ಮೇಲೆ ತಿಳಿಸಿರುವ ಯಾವುದೇ ಒಂದು ವಿಧಾನ ಅಥವಾ ತಂತ್ರವನ್ನು ಬಳಸಲು ಸಾಧ್ಯವಿಲ್ಲದಿರಬಹುದು. ವಿದ್ಯಾರ್ಥಿಯ ಬಗ್ಗೆ ಮಾಹಿತಿ ಸಂಗ್ರಹಿಸಲು ಈ ಕೆಳಗಿನ ಅಂಶಗಳನ್ನು ಗಮನದಲ್ಲಿರಿಸಿ ಕೊಳ್ಳಬಹುದು.

(ಮುಂದುವರೆಯುವುದು....)

# ಪರಿಸರ ವ್ಯಕ್ತಿ ಜಿ. ಡಿ. ಅಗರ್ವಾಲ್

## (ಸ್ವಾಮಿ ಜ್ಞಾನಸ್ವರೂಪ ಸಾನಂದ)



**ಇತ್ತೀಚೆಗೆ ಉತ್ತರಾಖಂಡದಲ್ಲಿ ಗಂಗೆ ಮುನಿದು ಜಲಪ್ರಳಯವನ್ನು ಉಂಟು ಮಾಡಿದಳು. ಶಾಂತ ಸ್ವರೂಪಿಣಿಯಾದ ಗಂಗೆ ಮುನಿಯಲು ಕಾರಣವಾದರೂ ಏನು ? ಮಾನವನು ಗಂಗೆಗೆ ಮಾಡಿದ ಅಪಚಾರ, ಅನಾಚಾರ. ಮಾನವ ಪ್ರಕೃತಿಯನ್ನು ತನ್ನ ಸ್ವಂತ ಆಸ್ತಿ ಎಂದು ತನ್ನ ಸ್ವಾರ್ಥಕ್ಕಾಗಿ, ಮರ ಕಡಿಯುವುದು, ನೆಲ ಬಗೆಯುವುದು, ಅಣೆಕಟ್ಟು ಕಟ್ಟುವುದು ಮುಂತಾದ ವಿನಾಶಕಾರಿ ಕೃತ್ಯವೆಸಗಿದಾಗ ಬರೀ ಗಂಗೆ ಯಾಕೆ, ಭೂತಾಯಿಯೂ ಮುನಿದು ಸರ್ವನಾಶ ಮಾಡಿದರು. ಹೀಗಾಗಬಾರದೆಂದೇ ಸಾನಂದರು ಉಪವಾಸ ಮಾಡಿದ್ದು ಅವರ ಮಾತು ಕೇಳದ ಫಲ ಈಗ ಅನುಭವಿಸಿದೆವು. ಇನ್ನಾದರೂ ನಮಗೆ ಆ ತಾಯಿ ಸದ್ಬುದ್ಧಿ ನೀಡಲಿ.**

ಎಂಜಿನಿಯರಿಂಗ್ ಪದವಿ ಪಡೆದು ಜಲವಿಜ್ಞಾನಿಯಾಗಿ, ನೀರಿನ ರಕ್ಷಣೆಯ ಬಗ್ಗೆ ಕಾನೂನುಗಳನ್ನು ಮಾಡಿ, ಭಾಗೀರಥಿ ನದಿಯ ಅಣೆಕಟ್ಟೆಗಳ ವಿರುದ್ಧ ಹೋರಾಡಿ, ಸನ್ಯಾಸಿಯಾಗಿ, ಗಂಗಾಶುದ್ಧಿಯ ಬಗ್ಗೆ 80ರ ಇಳಿವಯಸ್ಸಿನಲ್ಲಿ ಆಮರಣಾಂತ ಉಪವಾಸ ಮಾಡಿ ಗೆದ್ದ ಅಸಾಮಾನ್ಯ ಚೇತನ ಡಾ. ಜಿ.ಡಿ. ಅಗರ್ವಾಲ್. ಮಧ್ಯಪ್ರದೇಶದ ಚಿತ್ರಕೂಟದಲ್ಲಿ ಋಷಿಯಂತೆ ಜೀವಿಸುವ ಅವರು ಈಚೆಗೆ ಬೆಂಗಳೂರಿನ ಪೂರ್ಣಪ್ರಮತಿ ಶಾಲೆಯ ಪುಟ್ಟ ಮಕ್ಕಳಿಗೆ ನೀರಿನ ಮಹತ್ವವನ್ನು ತಿಳಿಸಲೆಂದು ಬಂದಿದ್ದರು.

ಡಾ. ಅಂಬೇಡ್ಕರ್ ಅಂದರೆ ಭಾರತದ ಸಂವಿಧಾನದ ರೂವಾರಿ ಎನ್ನುತ್ತೇವಲ್ಲ? ಹಾಗೆ ಅಗರ್ವಾಲರನ್ನು ನಮ್ಮ ದೇಶದ ಮಾಲಿನ್ಯ ನಿಯಂತ್ರಣ ಕಾಯಿದೆಗಳ ರೂವಾರಿ ಎನ್ನಬಹುದು.

ಉತ್ತರ ಪ್ರದೇಶದ ಮುಝಫ್ಫರ್ ಜಿಲ್ಲೆಯ ಕಾಂಧ್ಲಾ ಎಂಬ ಹಳ್ಳಿಯಲ್ಲಿ 1932 ರಲ್ಲಿ ಜನಿಸಿದ ಘನಶ್ಯಾಮ್ ದಾಸ್ ಅಗರ್ವಾಲ್ ಕಾನಪುರದ ಐಐಟಿಯಲ್ಲಿ ಎಂಜಿನಿಯರಂಗ್ ಪದವಿ ಪಡೆದರು. ಉತ್ತರ ಪ್ರದೇಶ ಸರಕಾರದ ನೀರಾವರಿ ಇಲಾಖೆಯಲ್ಲಿ ಡಿಸೈನ್ ಎಂಜಿನಿಯರ್ ಆಗಿದ್ದ ಅವರು ನಂತರ ಅಮೇರಿಕದ ಕ್ಯಾಲಿಫೋರ್ನಿಯಾದ ಬರ್ಕಲಿ ವಿಶ್ವವಿದ್ಯಾಲಯದಲ್ಲಿ ಪರಿಸರ ಎಂಜಿನಿಯರಿಂಗ್ ವಿಷಯದಲ್ಲಿ ಡಾಕ್ಟರೇಟ್ ಪದವಿ ಪಡೆದರು. ಮರಳಿ ಕಾನಪುರ ಐಐಟಿಗೆ ಬಂದು ನೀರಾವರಿಯ ಎಂಜಿನಿಯರಿಂಗ್ ಮೇಲೆ ಅನೇಕ ವಿದ್ಯಾರ್ಥಿಗಳಿಗೆ ಮಾರ್ಗದರ್ಶನ ಮಾಡಿದರು. ನಮ್ಮ ದೇಶದ ಜಲ ಪರಿಸರ ಮಾಲಿನ್ಯ ನಿಯಂತ್ರಣದ ಕಾನೂನುಗಳನ್ನು ರೂಪಿಸಲು ನೆರವಾದ ಅವರು ಕೇಂದ್ರ ಮಾಲಿನ್ಯ ನಿಯಂತ್ರಣ ಮಂಡಲಿಯ ಮೊದಲ ಸದಸ್ಯ ಕಾರ್ಯದರ್ಶಿ ಆಗಿ ಕೆಲಸ ಮಾಡಿದರು.

ಗಂಗಾನದಿಯ ಪಾವಿತ್ರ್ಯ ರಕ್ಷಣೆಯ ವಿಷಯದಲ್ಲಿ ಅವರ ಹೋರಾಟ ಅನುಪಮವಾದುದು. 'ಗಂಗಾ ಕಾರ್ಯಯೋಜನೆಗೆ ಮೀಸಲಾದ 1170 ಕೋಟಿ ರೂಪಾಯಿಗಳ ಬಹುಪಾಲು ಅಪವ್ಯಯ ಆಗುತ್ತಿದೆ ಎಂದು ಪ್ರತಿಭಟನೆ, ಉಪವಾಸ ಸತ್ಯಾಗ್ರಹ ಮಾಡಿದರು. ಹಿಮಾಚಲದ ಗಿರಿಕಂದರಗಳ ನಡುವೆ ಹರಿಯುವ ಗಂಗೆಗೆ 125 ಕಿ.ಮೀ ಉದ್ದದ ಕೊಳ್ಳದಲ್ಲಿ ಜಲವಿದ್ಯುತ್ ಯೋಜನೆಗೆಂದು ಸರಣಿ ಕಟ್ಟೆಗಳನ್ನೂ ಕೊಳವೆಗಳನ್ನೂ ಹಾಕಲು ಉತ್ತರಖಂಡ ಸರಕಾರ ಯೋಜನೆ ಹಾಕಿತು. ಅದು ಬೇಡವೆಂದೂ ಗಂಗೆಯ ಮೂಲದಲ್ಲಾದರೂ ತನ್ನ ಪಾಡಿಗೆ ತಾನು ಸಹಜವಾಗಿ ಹರಿಯಬೇಕೆಂದು ಒತ್ತಾಯಿಸಿ ಮತ್ತೆ ಆಮರಣಾಂತ ಉಪವಾಸ ಕೂತರು.38 ದಿನಗಳ ನಂತರ ಇನ್ನೇನು ಮರಣ ಸನ್ನಿಹಿತವಾದಾಗ ಕೇಂದ್ರ ಸರಕಾರ ತನ್ನ ಯೋಜನೆಗಳನ್ನು ಕೈ ಬಿಟ್ಟಿತು. ಗಂಗೆಯನ್ನು 'ರಾಷ್ಟ್ರೀಯ ನದಿ' ಎಂದು ಘೋಷಿಸಿತು.

ತಮ್ಮ 79 ನೇ ವಯಸ್ಸಿನಲ್ಲಿ ಸನ್ಯಾಸ ದೀಕ್ಷೆ ಸ್ವೀಕರಿಸಿ, ಸ್ವಾಮಿ ಜ್ಞಾನಸ್ವರೂಪ ಸಾನಂದ ಎಂಬ ಹೊಸ ಹೆಸರನ್ನು ಪಡೆದ ಇವರಿಗೆ ಈಗಲೂ ಗಂಗೆಯದೇ ಧ್ಯಾನ. ದೇಶದ ಸ್ವಾತಂತ್ರ್ಯ ಹೋರಾಟಕ್ಕೆ ಗಾಂಧೀಜಿ ಇದ್ದಂತೆ, ಗಂಗಾನದಿಯ ಸ್ವಾತಂತ್ರ್ಯಕ್ಕೆ ಸಾನಂದ ಸ್ವಾಮಿ. ■

# ಸಮರ್ಪಣೆ –9 ರ ಮಗ್ಗಿಯೇ ಆದರ್ಶ !
# ಸಾರ್ಥಕ ಬದುಕಿಗೆ ಸಮರ್ಪಣೆ ಅತ್ಯಗತ್ಯ

■ ನ. ನಾಗರಾಜ

ನಿತ್ಯ ಜೀವನದಲ್ಲೂ ಸದಾ ಅನುಭವಕ್ಕೆ ಬರುವ ಸರಳ ಸಂಗತಿಯಿದು. ಸಮರ್ಪಣೆಯೆಂದರೆ ಸಾಮಾನ್ಯ ಭಾಷೆಯಲ್ಲಿ ಕೊಡುವುದು ಎಂದರ್ಥ. ಕೊಡದಿದ್ದಲ್ಲಿ ಏನೂ ಪಡೆಯಲಾರೆವು. (ಬೇರೆಯವರಿಗಾಗಿ ನಾವಾಗಬಹುದು– ನಮಗಾಗಿ ಬೇರೆಯವರಾಗಬಹುದು) ಬದುಕಲು ಬೇಕಾದ ಆಹಾರ –ನಿದ್ರೆ– ಇಂದ್ರಿಯ ಸುಖಗಳನ್ನೇ ತೆಗೆದು ಕೊಳ್ಳೋಣ ತಿನ್ಬೇಕು– ಕುಡಿಬೇಕೂಂದ್ರೂ ಆ ವಸ್ತು ತರಲು ಹಣ ಕೊಡ್ಬೇಕು– ತರೋಕ್ಕೋ ಬರೇ ಸಮಯ ಕೊಡ್ಬೇಕು– ಸಿದ್ಧಪಡಿಸೋ ಶ್ರಮ ಕೊಡ್ಬೇಕು– ಕೈ ಬಾಯಿ ಕೆಲ್ಸಮಾಡ್ಬೇಕು. ಅಂತಯೇ, ನಿದ್ದೆ ಮಾಡ್ಬೇಕು– ಸಂಗೀತ ಕೇಳ್ಬೇಕು– ನೃತ್ಯ ನಾಟಕ ನೋಡ್ಬೇಕು, ಕಥೆ ಓದ್ಬೇಕು, ಆದರೆ ಸಮಯ ಕೊಡಲ್ಲ ಅಂದ್ರಾಗತ್ತಾ ! ದುಡ್ಡು ಖರ್ಚುಮಾಡಲ್ಲಾ ಅಂದ್ರಾಗತಾ ! ಮನಸ್ಸು ಕೊಡಲ್ಲಾ ಅಂದ್ರಾಗತ್ತಾ ! ... ಕೊಡ್ಲೇಬೇಕು.

ನಿತ್ಯ ಬದುಕಿಗೇ ಇಷ್ಟೆಲ್ಲಾ ಕೊಡ್ಬೇಕು ಅಂದ್ಮೇಲೆ ...... ಸಾರ್ಥಕ ಬಾಳ್ವೆಗೆ ಎಷ್ಟೆಲ್ಲಾ ಕೊಡ್ಬೇಕಾಗುತ್ತೋ ? ಯೋಚ್ಸಿ!

ಆದ್ರಿಂದ್ಲೇ ಕನ್ನಡದ ಕವಿ ಹೇಳಿದ್ದು ಕೊಟ್ಟದ್ದು ತನಗೆ, ಬಚ್ಚಿಟ್ಟಿದ್ದು ಪರರಿಗೆ ಅಂದ್ರೆ ತನಗಲ್ಲ. ಅಂತ ಹೌದಾ?

ಸಂಸ್ಕೃತಜ್ಞರು – ತ್ಯಾಗೇನೈಕೇನ ಅಮೃತತ್ವಮಾನಷುಃ (ಕೊಡುವುದರಿಂದ ಮಾತ್ರವೇ ಅಮರತ್ವ) ಎಂದು ಸಾರಿದರು.

ವಿವೇಕಾನಂದರ ಸ್ಪಷ್ಟೋಕ್ತಿ – 'They only live who live for others' ಎಂದದ್ದಷ್ಟೇ ಅಲ್ಲ 'Rest are……. ಎಂದು ಚಾಟಿ ಬೀಸಿಯ ಹಿಂದಿಯ ಹಾಡೇ ಇದ್ಯಲ್ಲ ...... ದೇಶ ಹಮೇ ದೇತಾ ಹೈ ಸಬ್ ಕುಷ್ ಹಂ ಭೀ ತೋ ಕುಷ್ ದೇನಾ ಸೀಖೆ ಎಲ್ಲಾ ಭಾಷೆಲೂ ಇದೇ ಬಿಡೀ ಸ್ವಾಮಿ.

ನಮ್ಗೂ ಗೊತ್ತು ಜಿಲೇಬೀ ತಾನೇ ತಿನ್ನೋದಕ್ಕಿಂತ ಸಂತರ್ಪಣೆ ಮಾಡಿ ನೂರಾರು ಜನರಿಗೆ ಹಂಚಿದಾಗ ಸಿಗೋ ಆನಂದ, ವಾಹ್ !

ಹೀಗೆ ಕೊಡವುದರಲ್ಲೇ ಸಾರ್ಥಕ ಕಂಡವರು ನಮ್ಮ ಜನ, ಅಷ್ಟೇಕೆ ಪ್ರಕೃತಿಯ ಈ ಗುಣದಿಂದಲೇ ನಾವೆಲ್ಲಾ ಬದ್ಕಿರೋದು ಸ್ವಾಮಿ. ಹರಿಯುವ ನೀರು, ಬೆಳೆಯುವ ಮರ, ಎಲ್ಲೆಲ್ಲೋ ಮೇಯ್ದು ಬರುವ ಗೋವು ನಮಗೆ ಆದರ್ಶ ಯಾಕ್ಹೇಳಿ? ಕೊಡ್ತಾವೆ – ಪಡೆಯೋಲ್ಲಾ.

ಇಂಥಾ ಕೊಡೋದ್ರಲ್ಲಿರೋ ಸುಖ ತಾಯಿನ್ನೋಡಿ ಕಲಿಬೇಕ್ರಿ. ಎಲ್ಲ ಬಡ್ತಿ ಮಕ್ಳು, ಮೆಯವ್ರು ಅಷ್ಟೇಕೆ ಮನೆಗ್ಸಂದೋರ್ಗು ಬಡ್ತಿ ಅವರ ಮುಖದ ಮೇಲೆ ಆನಂದ ಕಂಡ ನಂತರ ಉಳ್ದಿದ್ದು – ಪಳ್ದಿದ್ದು ಸೀದಿದ್ದೋ – ಆರಿದ್ದೋ ಅಷ್ಟನ್ನೇ ಸ್ವೀಕರಿಸಿಯೋ ಸಮಾಧಾನ ಕಾಡುವ ತ್ಯಾಗ ಮೂರ್ತಿ ಅಮ್ಮನ ಬಗ್ಗೆ ಎಲ್ಲೆಲ್ಲೂ ಎಲ್ಲಾರ್ಗೂ ಅದೆಷ್ಟು ಅಭಿಮಾನ – ಗೌರವ ! ತಾಯಿಗೆ ತಣ್ಗೆ ಮಕ್ಕಳಾಗುವಾಸೆ.

ಅದ್ಸರಿ, ಅದೇನೋ 9 ರ ಮಗ್ಗಿಂದ್ರಲ್ಲಾ, ಅಂತ ನೆನಪಿಸಿದ್ರಲ್ಲಾ ಒಳ್ಳೇದಾಯ್ತು. ನ ಅಲೆಗಳಲ್ಲಿ

ನಮ್ಮೆಲ್ಲರ ಜೀವನಕ್ಕೆ 9 ರ ಮಗ್ಗಿ ಆದರ್ಶವಾಗಿರಲಿ, ಆರಂಭದಲ್ಲಿ ನಾವೂ 9x1 ರಂತೇ ಚಿಂತಿಸುತ್ತೇವೆ. ಅಂದ್ರೆ 09. 0 ಉಳಿದವರಿಗೆ – ಒಂಭತ್ತೂ ನನ್ಗೇ. ಹಾಗಾಗಿ ಎಲ್ಲ ಮಕ್ಳೂ (ನಾವೂ ಹಾಗಿದ್ದಾಗ) ಏನೇ ಕೊಟ್ರೂ ಬಯ್ಯಾಕ್ಕೊಂಡ್ಬಿಡ್ತಿದ್ವಿ.

9x2 –18 ಮನೇಲಿರೋ ಹಿರಿಯರು ಬಾಳೆ ಹಣ್ಣು ಕೊಟ್ಟು ಒಂಚೂರು ನಂಗ್ಕೊಡು ಅಂತ್ಹೇಳಿ ಬೇರೆಯವರಿಗೆ 8 ನನಗೆ ಎನ್ನುವ ಶಿಕ್ಷಣ ಕಲಿಸಿ ಒಂದ್ಹೆಜ್ಜೆ ಮುಂದೊಯ್ಯತ್ತಾರೆ.

9x3= 27 ...... ಗೊತ್ತಾಯ್ತಲ್ಲಾ

ಕ್ರಮೇಣ ಕೊಡೋ ಗುಣ ವಿಕಾಸವಾಗತ್ತೆ

9x5 =45 ಬಂದಾಗಲೂ ನನಗೇ ಹೆಚ್ಚು ಎಂಬ ಭವವೇ ಉಳಿದಿರುತ್ತದೆ. ಅಲ್ಲಿಂದ ಮುಂದುವರೆದಾಗ ನಿಜವಾದ ಬೆಳವಣಿಗೆ ಆರಂಭದೊಡ್ಡೊರು ಕಿತ್ಲೇ ಹಣ್ಣು ಕೊಡ್ತಾರೆ. ನಂಗೊಂದು ತೊಳೆ – ಅಕ್ಕಂಗೊಂದು – ಅಣ್ಣಂಗೊಂದು ಅಮ್ಮಂಗೆ ಅಜ್ಜಂಗೆ ಅಂತ್ಹೇಳ್ತಾ ಬೇರೆಯವರ್ಗೇ ಜಾಸ್ತಿ ಹಂಚಿಸ್ತಾರೆ. ಆದರೆ ಕೊಡೋದ್ರಲ್ಲಿ ಇರೋ ಸುಖದಿಂದಾಗಿ 'ಕಮ್ಮಿಯಾಯ್ತು' ಎಂಬ ಭಾವ ಕಾಡುವುದಿಲ್ಲ. ಅದೇ 9x6 = 54 ರಿಂದ ಆರಂಭವಾಗುವ ಪ್ರಗತಿ ಮಾರ್ಗ.

9x9 =81 ರ ವರೆಗೆ ಏರುವವರು ಕಡಿಮೆ ವ್ಯವಸ್ಥೆಯಲ್ಲೂ ಸಂತಸದ ಸರಳ, ಸಾರ್ಥಕ ಜೀವನ ನಡೆಸುತ್ತಾ ಮಹಾಮಾನವನಾಗುತ್ತಾರೆ. ಸ್ವಂತಕ್ಕೆ ಸ್ವಲ್ಪ ಸಮಾಜಕ್ಕೆ ಸರ್ವಸ್ವ' ಎಂಬ ಆದರ್ಶ ಹಾಕುತ್ತಾರೆ. ಇನ್ನು 9x10 =90 ಸ್ಥಿತಿ ತಲುಪಿದ್ರೆ ದೇವರೇ ಆಗಬಹುದು.

ಓಹೋ, ಗುರುಪೂಜೆ ಬಂತಲ್ವಾ, ಅದ್ಕೇ ನೆನಪಾಗಿರಬಹುದು. ●

# ಪ್ರಾಥಮಿಕ ಶಾಲಾ ಹಂತದಲ್ಲಿ ಇಂಗ್ಲೀಷ್ ಭಾಷಾ ಬೋಧನೆ

■ ಡಾ. ನಿಕೇತನ
ಉಡುಪಿ

"ಭೌತಶಾಸ್ತ್ರ, ರಸಾಯನಶಾಸ್ತ್ರ, ಜೀವಶಾಸ್ತ್ರ, ಗಣಿತ ಇವುಗಳನ್ನು ನಾನು ನಾಲ್ಕು ವರ್ಷಗಳಲ್ಲಿ ಕಲಿತದ್ದನ್ನು ಒಂದೇ ವರ್ಷದಲ್ಲಿ ಕಲಿಯಬಹುದಿತ್ತು. ನಾನದನ್ನು ಇಂಗ್ಲೀಷ್ ಮೂಲಕ ಕಲಿಯದೆ ನನ್ನ ಭಾಷೆಯಾದ ಗುಜರಾತಿಯ ಮೂಲಕ ಕಲಿತಿದ್ದರೆ .. .. .. " ಗಾಂಧೀಜಿ.

"ಮಕ್ಕಳ ಸ್ಕೂಲು ಮನೇಲಲ್ವೇ" ಟಿ.ಪಿ. ಕೈಲಾಸಂ.

"ಚಿಂತನೆ ಮತ್ತು ಭಾಷೆ ದೇಹ ಮತ್ತು ಆತ್ಮವಿದ್ದಂತೆ. ಮಗು ತನ್ನ ಬದುಕಿನ ಮೊದಲ ಹಂತದ ಅನುಭವಗಳನ್ನು ಗಳಿಸುವ ಮಾತೃಭಾಷೆಯಲ್ಲೇ ಚಿಂತಿಸಿ, ಕನಸು ಕಾಣುತ್ತದೆ. ಭಾವನೆಗಳು ಮತ್ತು ಚಿಂತನೆಯ ನಿಖರ ಸಂವಹನಕ್ಕೆ ಕೂಡಾ ಮಾತೃಭಾಷೆಯೇ ಸೂಕ್ತ ಮಾಧ್ಯಮ" – ಜಿ.ಸಿ ಶರ್ಮ.

"ಸೃಜನಶೀಲತೆ ಯಾವಾಗಲೂ ಸಹಜ ಸ್ವಭಾವದ ಭಾಷೆಯಲ್ಲಿ ಅಭಿವ್ಯಕ್ತವಾಗುತ್ತದೆ". – ಚಾಮ್ ಸ್ಕಿ

"ಜ್ಞಾನಾರ್ಜನೆಯೇ ನಿಮ್ಮ ಪರಮಗುರಿಯಾದರೆ, ನಿಮ್ಮ ಶಕ್ತಿಯನ್ನೂ, ಕಾಲವನ್ನೂ ಒಂದು ವಿದೇಶಿಯ ಭಾಷೆಯನ್ನು ಕಲಿಯುವುದಕ್ಕಾಗಿ ವ್ಯರ್ಥ ಮಾಡಬೇಡಿ. ಅವುಗಳನ್ನು ಆಳವಾದ ಜ್ಞಾನ ಪಡೆಯುವುದಕ್ಕಾಗಿ ಉಪಯೋಗಿಸಿ."

"ನನಗೆ ಇಂಗ್ಲೀಷ್ ಶಿಕ್ಷಣ ದೊರೆಯದೆ ಬಂಗಾಲಿಯಲ್ಲಿ ನನಗೆ ಹೆಚ್ಚಿನ ಶಿಕ್ಷಣ ದೊರೆತಿದ್ದರೆ ನಾನು ಇನ್ನೂ ಉತ್ತಮ ಕವಿಯಾಗುತ್ತಿದ್ದೆ.

ತನ್ನ ಹೃದಯಾಂತರಾಳದ ಭಾವನೆಗಳನ್ನು
ಪರಭಾಷೆಯಲ್ಲಿ ತಿಳಿಸಲು ಪ್ರಯತ್ನಿಸುವುದು
ಪ್ರಿಯತಮೆಗೆ ತನ್ನ ಮುಗುಳ್ನಗೆಯನ್ನು
ವಕೀಲನ ಮೂಲಕ ತಿಳಿಸಲು ಪ್ರಯತ್ನಿಸಿದಂತೆ
–ರವೀಂದ್ರನಾಥ ಠಾಕೂರ್.

"ನನ್ನ ತಂದೆ ನನ್ನನು ಹೆಚ್ಚು ಷೋಕಿಯಾದ ಇಂಗ್ಲೀಷ್ ಶಾಲೆಗೆ ಬದಲು ಪ್ರಾಂತಭಾಷಾ ಶಾಲೆಗೆ ಸೇರುವಂತೆ ಒತ್ತಾಯ ಪಡಿಸಿದರು. ಇದು ನೆಲವನ್ನು ಉತ್ತು ಹಸುರನ್ನು ಅರಳಿಸುವ ಕೃಷಿಕ ಮಕ್ಕಳ ಮತ್ತು ಮಹಾನದಿಗಳಲ್ಲಿರುವ ವಿಚಿತ್ರ ಜಂತುಗಳ ಬಗ್ಗೆ ನನಗೆ ತಿಳಿಸಿದ ಮೀನುಗಾರರ ಮಕ್ಕಳ ಸಂಪರ್ಕವನ್ನು ನನಗುಂಟು ಮಾಡಿತು. ಪ್ರಕೃತಿಯನ್ನು ಕುರಿತು ತೀವ್ರ ಪ್ರೇಮ ಅವರಿಂದ ನನಗೆ ಬಂತು. ನನ್ನ ಸ್ವಂತ ಭಾಷೆಯಲ್ಲಿ ಆಲೋಚಿಸುವುದನ್ನು ಮತ್ತು ಭಾರತೀಯ ಮಹಾಕಾವ್ಯಗಳ ಮೂಲಕ ನಮ್ಮ ರಾಷ್ಟ್ರೀಯ ಸಂಸ್ಕೃತಿಯ ಆಸ್ತಿಯನ್ನು ಪಡೆದುಕೊಳ್ಳುವುದನ್ನು ನಾನು ಕಲಿತೆ"
–ಸರ್. ಜಗದೀಶ ಚಂದ್ರಬೋಸ್

ಸೃಜನ ಶೀಲತೆ ಮತ್ತು ಚಿಂತನಶೀಲತೆಯ ಬೆಳವಣಿಗೆಯಲ್ಲಿ ಮಾತೃಭಾಷಾ ಮಾಧ್ಯಮದ ಪ್ರಭಾವ ಎಷ್ಟು ಪರಿಣಾಮಕಾರಿ ಎಂಬುದನ್ನು ವೈಜ್ಞಾನಿಕವಾಗಿ ನಿರೂಪಿಸುವ ದೃಷ್ಟಿಯಿಂದ ಇಷ್ಟೆಲ್ಲಾ ವಿದ್ವಾಂಸರ, ಶಿಕ್ಷಣ ತಜ್ಞರ, ಶ್ರೇಷ್ಠ ಸಾಹಿತಿಗಳ, ಮಹಾನ್ ವ್ಯಕ್ತಿಗಳ ಮಾತುಗಳನ್ನು ಉಲ್ಲೇಖಿಸಲಾಗಿದೆ. ಇದರ ಮುಖ್ಯ ಉದ್ದೇಶ ಮಾತೃಭಾಷೆ ಶಿಕ್ಷಣದ ಮಾಧ್ಯಮವಾಗಬೇಕೆನ್ನುವ ವೈಜ್ಞಾನಿಕ ದೃಷ್ಟಿಕೋನ ವನ್ನು ಪ್ರತಿಪಾದಿಸುವುದು. ಜೊತೆಗೆ ಮೇಲಿನ ವಿಜ್ಞಾನಿಗಳ, ಶಿಕ್ಷಣ ತಜ್ಞರ, ಶ್ರೇಷ್ಠ ಸಾಹಿತಗಳ ಅಭಿಪ್ರಾಯಗಳನ್ನು ಅವಲೋಕಿಸಿದಾಗ ಮಾತೃಭಾಷೆಯೇ ಶಿಕ್ಷಣದ ಮಾಧ್ಯಮವಾದರೆ ಉಂಟಾಗಬಹುದಾದ ಹೊಸತನ, ಪ್ರಗತಿಯನ್ನು ಅರ್ಥೈಸಿಕೊಳ್ಳಬಹುದಾಗಿದೆ.

"ಪೂರ್ಣ ನ್ಯಾಯಪೀಠದ ತೀರ್ಪಿನ 14ನೇ ಪ್ಯಾರಾದಲ್ಲಿ ನಿರೂಪಿಸಿರುವಂತೆ ಪ್ರಾಥಮಿಕ ಶಿಕ್ಷಣವು ಪ್ರಾದೇಶಿಕ ಭಾಷೆ ಅಥವಾ ಮಾತೃಭಾಷೆಯಲ್ಲಿ ಆಗಬೇಕೆಂದು ಈಗ ಸ್ಪಷ್ಟವಾಗಿ ನಿಗದಿ ಪಡಿಸಲಾಗಿದೆಯೆಂದರೆ, ರಾಜ್ಯದ ಖಾಯಂ ನಿವಾಸಿಗಳ ಮಕ್ಕಳು ತಮ್ಮ ಬಾಲ್ಯಾವಸ್ಥೆಯಿಂದಲೇ ಪ್ರಾದೇಶಿಕ ಭಾಷೆಯಲ್ಲಿ ಕಲಿತುಕೊಳ್ಳುತ್ತಾರೆ. ಹಾಗೂ ಅದು ಅವರ ನೆಚ್ಚಿನ ಮಾತೃಭಾಷೆಯಾಗುತ್ತದೆಂಬ ಕಾರಣದಿಂದ. ವಾಸ್ತವವಾಗಿ ಮರಾಠಿ, ಉರ್ದು, ತಮಿಳು ಮತ್ತು ತೆಲುಗನ್ನು ಪ್ರತಿನಿಧಿಸುವ ಭಾಷಾ ಅಲ್ಪಸಂಖ್ಯಾತರಲ್ಲಿ ಬಹುಮಂದಿ ಬಹಳ ಕಾಲದಿಂದಲೂ ಈ ರಾಜ್ಯದ ನಿವಾಸಿಯಾಗಿದ್ದಾರೆ. ಮತ್ತು ಪ್ರಾದೇಶಿಕ ಭಾಷೆ ಎಂದರೆ ಕನ್ನಡವನ್ನು ತಮ್ಮ ಎರಡನೆಯ ಮಾತೃಭಾಷೆಯಾಗಿ ವ್ಯಾವಹಾರಿಕವಾಗಿ ಅಳವಡಿಸಿಕೊಂಡಿರುತ್ತಾರೆ. ಎನ್ನುವುದು ಸರ್ವವಿದಿತವಾದ ತಿಳುವಳಿಕೆಯೇ" (ಪು. 5, ಮಾಧ್ಯಮ ಕನ್ನಡ ಪರ ಆಂದೋಲನ ಮತ್ತು ವರದಿಗಳು. ಸ.ರ. ಸುದರ್ಶನ, 2006, ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು).

(ಮುಂದುವರಿಯುವುದು)

# ಗುರುಪೂರ್ಣಿಮೆಯ ಮಹತ್ವ



ಭಾರತೀಯ ಸಂಸ್ಕೃತಿಯಲ್ಲಿ ಜನ್ಮನೀಡಿದ ತಾಯ್ತಂದೆಯರ ನಂತರದ ಸ್ಥಾನ ಗುರುವಿಗೆ. ತಾಯಿ, ತಂದೆಯರು ದೇವರಾದರೆ, ಆಚಾರ್ಯನೂ ದೇವರೇ. ಅದಕ್ಕಾಗಿ ಆಚಾರ್ಯ ದೇವೋಭವ. ನಮ್ಮ ಪೂರ್ವಜರು ಇನ್ನೂ ಒಂದು ಹೆಜ್ಜೆ ಮುಂದೆಸಾಗಿ 'ಗುರು'ವನ್ನು ಬ್ರಹ್ಮ, ವಿಷ್ಣು, ಮಹೇಶ್ವರರೆಂದು ತ್ರಿಮೂರ್ತಿಗಳಿಗೆ ಹೋಲಿಸಿದರು. ಬಂಡೆಯಂತೆ ಜಡವಾಗಿ ಬಿದ್ದ ಮಾನವನನ್ನು ಸುಂದರವಾಗಿ ಕಡೆದು ಮೂರ್ತರೂಪ ಕೊಡುವ ಗುರು ಸೃಷ್ಟಿಕರ್ತನಾದ ಬ್ರಹ್ಮನಲ್ಲದೆ ಮತ್ತೇನು? ಸಹವಾಸ ದೋಷದಿಂದ ಚಿನ್ನವೂ ಮಸಕಾಗುವುದಂತೆ. ಇನ್ನು ಚಂಚಲ ಚಿತ್ತನಾದ ಮಾನವನ ಪಾಡೇನು? ಅದಕ್ಕಾಗಿ ಮಾಲಿ, ಗಿಡವನ್ನು ರಕ್ಷಿಸಿ, ಪೋಷಿಸುವಂತೆ, ಶಿಷ್ಯನನ್ನು ರಕ್ಷಿಸಿ, ಪೋಷಿಸುವ 'ಗುರು' ಮಹಾವಿಷ್ಣುವೇ ಅಲ್ಲವೇ? ಕಾಮಕ್ರೋಧಾದಿಗಳೆಂಬ ಕತ್ತಲನ್ನು ನಾಶಗೊಳಿಸಿ ಶಿಷ್ಯನಲ್ಲಿ ಜ್ಞಾನದ ಪ್ರತಿಭೆಯನ್ನು ಬೆಳಗಿಸುವ ಗುರುವು ಶಿವನ ಅವತಾರವೂ ಹೌದು.

ಇಂಥ ಮಹಾನ್ ಗುರುಪರಂಪರೆಯನ್ನು ಸ್ಮರಿಸುವ ಆಷಾಢ ಶುದ್ಧ ಪೂರ್ಣಿಮೆಯ ಪುಣ್ಯ ದಿನವೇ 'ಗುರು ಪೂರ್ಣಿಮಾ' ಅಥವಾ ವ್ಯಾಸಪೂರ್ಣಿಮ. ಅಂದು ವೇದವ್ಯಾಸರ ಜನ್ಮದಿನ. ಬೆಸ್ತಕನ್ಯೆ ಯೋಜನಗಂಧಿಯ ಮಗನಾಗಿ ಜನಿಸಿದರೂ, ತನ್ನ ಸ್ವಂತ ಆತ್ಮಶಕ್ತಿಯಿಂದ ಬ್ರಹ್ಮ ಜ್ಞಾನಿಯಾದವರು ಮಹರ್ಷಿವೇದವ್ಯಾಸರು.

ಸ್ವತಃ ಸೃಷ್ಟಿಕರ್ತನಾದ ಭಗವಂತನಿಂದ ಉಗಮಿಸಿ ಅಪೌರುಷೇಯವೆಂದು ಕರೆಸಿಕೊಂಡ ಅಪಾರ ಜ್ಞಾನರಾಶಿಯನ್ನು ಋಕ್, ಯಜುರ್, ಸಾಮ ಮತ್ತು ಅಥರ್ವ ಎಂದು ನಾಲ್ಕು ಭಾಗಗಳನ್ನಾಗಿ ವಿಭಜಿಸಿದ ಮಹಾಜ್ಞಾನಿ ಆತ. ಇಷ್ಟೇ ಅಲ್ಲ, ಪ್ರತಿ ವೇದವನ್ನು ಸಂಹಿತ, ಬ್ರಾಹ್ಮಣ ಮತ್ತು ಆರಣ್ಯಕ ಎಂದು ಮತ್ತೆ ಮೂರು ಭಾಗ ಮಾಡಿದ್ದಲ್ಲದೆ, ಕೊನೆಯದಾದ ಆರಣ್ಯಕದಲ್ಲಿ ವೇದಗಳ ಸಾರವಾದ ಉಪನಿಷತ್ತುಗಳನ್ನು ಕೂಡಿಸಿದರು. ಅದಕ್ಕಾಗಿ ಜಗತ್ತು ಆತನನ್ನು ವೇದವ್ಯಾಸನೆಂದು ಗುರುತಿಸಿತು. ಭಗವಾನ್ ವಿಷ್ಣುವಿನ ಅಪರಾವತಾರವೆಂದು ಗೌರವಿಸಿತು.

ವೇದ, ವೇದಾಂತಗಳು ಜನಸಾಮಾನ್ಯರ ತಿಳಿವಿಗೆ ನಿಲುಕದು ಎಂದರಿತ ವ್ಯಾಸರು, ಸಾಮಾನ್ಯ ಜನರಿಗೂ ಜ್ಞಾನದ ಬೆಳಕು ಸಿಗಬೇಕೆಂದೇ 18 ಪುರಾಣಗಳನ್ನೂ, ಮಹಾಭಾರತ, ಭಾಗವತವನ್ನು ರಚಿಸಿದರು. ಭಾರತ, ಭಾಗವತದ ಕಥೆಗಳ ಮೂಲಕ ಬದುಕಿನ ಉದ್ದೇಶ, ಜೀವನ ನಡೆಸುವ ಪರಿ ಮತ್ತು ಬಾಳಿನ ಅಂತಿಮ ಲಕ್ಷ್ಯಗಳ ಅರಿವನ್ನು ಉಂಟುಮಾಡಿದರು. ಇದೇ ಕಾರಣದಿಂದ ಇಂದಿಗೂ ನಮ್ಮ ದೇಶದ ಮನೆ ಮನೆಯಲ್ಲಿ ಭಾರತ, ಭಾಗವತಗಳು ಮನೆ ಮಾತು.

ಆಡುಮುಟ್ಟದ ಸೊಪ್ಪಿಲ್ಲ, ಭಗವಾನ್ ವ್ಯಾಸರು ಸ್ಪರ್ಶಿಸದ ಜ್ಞಾನರಾಶಿ ಇಲ್ಲ. ಇದಕ್ಕಾಗಿ ಹುಟ್ಟಿದ ಗಾದೆ 'ವ್ಯಾಸೋಚ್ಚಿಷ್ಟಂ ಜಗತ್ ಸರ್ವಂ'.

ಇಂಥ ಮಹಾಪುರುಷನನ್ನು ಸ್ಮರಿಸುವುದು, ಅವರ ಆದರ್ಶವನ್ನು ಪಾಲಿಸುವುದು, ಜ್ಞಾನದ ವಾರಸುದಾರಿಕೆಯನ್ನು ಹೊತ್ತು, ಅದರ ಪ್ರಸಾರಕ್ಕೆಂದೇ ಶಿಕ್ಷಕ ವೃತ್ತಿಯನ್ನು ಸ್ವೀಕರಿಸಿರುವ ಎಲ್ಲ ಶಿಕ್ಷಕರ ಕರ್ತವ್ಯವಾಗಬೇಕಲ್ಲವೇ? ಈ ಮಹಾನ್ ಜ್ಞಾನ ನಿಧಿಗೆ ಗುರುಪೂರ್ಣಿಮೆಯಂದು ಕೃತಜ್ಞತೆಯನ್ನು ಸಲ್ಲಿಸುವುದು ನಮ್ಮ ಬಾಧ್ಯತೆಯಾಗಬೇಕಲ್ಲವೇ?

ಗುರುಪೂರ್ಣಿಮೆ ಬರುವ, ಆಷಾಢಮಾಸ, ಅಧ್ಯಯನಕ್ಕೆ ಮೀಸಲಾದ ಮಾಸ. 'ಗುರು' ಅಧ್ಯಯನ, ಅಧ್ಯಾಪನ ನಿರತ. ಅದಕ್ಕಾಗಿ ಶಿಕ್ಷಕರಾದ ನಾವು ನಿಂತ ನೀರಾಗದೆ, ಸದಾ ಅಧ್ಯಯನ ನಿರತರಾಗಬೇಕು. ಸದಾಹರಿವ ನದಿಯಾಗಬೇಕು. ಆಗ ಮಾತ್ರ ಸ್ವಚ್ಛ, ಶುಭ್ರ, ಶೀತ ಜ್ಞಾನಜಲವನ್ನು ಶಿಷ್ಯರಿಗೆ ಕುಡಿಸಲು ಸಾಧ್ಯ. ಈ ನಿಟ್ಟಿನಲ್ಲಿ ನಾವು ಯೋಚಿಸಬೇಕೆಂದೇ ಕರ್ನಾಟಕ ರಾಜ್ಯ ಮಾಧ್ಯಮಿಕ ಶಿಕ್ಷಕ ಸಂಘವು 'ಗುರುವಂದನಾ' ಕಾರ್ಯಕ್ರಮವನ್ನು ಆಯೋಜಿಸಿದೆ. ಆಷಾಢ ಶುದ್ಧ ಪೂರ್ಣಿಮೆಯಿಂದ ಮುಂದಿನ 10–12 ದಿನಗಳ ನಡುವೆ ವಿದ್ಯಾರ್ಥಿಗಳು, ಪೋಷಕರು ಹಾಗೂ ಶಿಕ್ಷಕರು ಒಂದೆಡೆ ಸೇರಿ ಅನಾದಿ ಕಾಲದಿಂದ ಹರಿದು ಬಂದಿರುವ ನಮ್ಮ ಗುರು ಪರಂಪರೆಯನ್ನು ಸ್ಮರಣೆ ಮಾಡುತ್ತಾ, ಅವರು ನಡೆದ ದಾರಿಯಲ್ಲೇ ನಡೆಯುವ ಸಂಕಲ್ಪ ಮಾಡಬೇಕಿದೆ. "ತ್ಯಾಗ ಮತ್ತು ಸೇವೆ" ಎಂಬ ಮೂಲ ಚಿಂತನೆಯ ಆ ದಾರಿಯೇ ಮಾನವ ಬದುಕಿನ ಸುಖ ನೆಮ್ಮದಿಯ ರಾಜಮಾರ್ಗ ಎಂಬ ಅರಿವನ್ನು, ಇಂದಿನ ಸಮಾಜದಲ್ಲಿ ಮೂಡಿಸಬೇಕಿದೆ. ಆಗ, ಹಾಗಾದಾಗ ಮಾತ್ರ ಜಗತ್ತು ಸಂಘರ್ಷಗಳಿಂದ ಮುಕ್ತವಾಗಿ ಮಾನವ ಜನಾಂಗದಲ್ಲಿ ಶಾಂತಿ ನೆಲಸೀತು.

– ಎಚ್ಚೆನ್ನಾರ್

# ಚಿತ್ರ ಸುದ್ದಿ



ನಿವೃತ್ತ ಅಧ್ಯಾಪಕರಿಗೆ ಸನ್ಮಾನ. (ಎ–ಬ) ಶ್ರೀಮತಿ ಆರ್. ಸೀತಾಲಕ್ಷ್ಮಿ, ಶ್ರೀ ಜನಾರ್ಧನ್, ಶ್ರೀಮತಿ ವರಲಕ್ಷ್ಮಿ ಮತ್ತು ಶ್ರೀಮತಿ ಸುಪರ್ಣ




ಅತಿ ಹೆಚ್ಚು ಅಂಕ ಗಳಿಸಿ ಸನ್ಮಾನಿತರಾದ ವಿದ್ಯಾರ್ಥಿಗಳೊಂದಿಗೆ ಅತಿಥಿಗಳು.



'ಉತ್ತರಾಖಂಡ' ನೆರೆಪೀಡಿತರ ರಕ್ಷಣೆಯಲ್ಲಿ ಹುತಾತ್ಮರಾದ ಸೈನಿಕರಿಗೆ ಮತ್ತಿತರರಿಗೆ ಶ್ರದ್ಧಾಂಜಲಿ ಸಮರ್ಪಣೆ

srushtidesigns@gmail.com

Reg. No. RNI 45459/85
CPMG/KA/BGS-125/2012-14
Posted at Bangalore GPO
Bangalore - 560 001

JULY 2013
Date of Posting
20th or 21st of every month

## ಶಿಕ್ಷಕ ಸಮಾಚಾರ ತರಿಸಲು ಇಲಾಖೆಯ ಆದೇಶ

D.P.I. (Sepecial) ಅವರ ಆದೇಶ ಸಂಖ್ಯೆ T3-LBS-RKM-7/79-80 ದಿನಾಂಕ 20-6-1980 ರ ಪ್ರಕಾರ ರಾಜ್ಯದ ಎಲ್ಲಾ ಪ್ರಾಥಮಿಕ ಶಾಲೆಗಳು, ಹೈಸ್ಕೂಲುಗಳು, ಜ್ಯೂನಿಯರ್ ಕಾಲೇಜುಗಳು ಮತ್ತು ಶಿಕ್ಷಕರ ತರಬೇತಿ ಸಂಸ್ಥೆಗಳು (T.T.I.) ತಮ್ಮ ವಾಚನಾಲಯ ಅಥವಾ ಪುಸ್ತಕಾಲಯ ನಿಧಿಯಿಂದ ''ಅಖಿಲ ಕರ್ನಾಟಕ ಶಿಕ್ಷಕ ಸಮಾಚಾರ'' ಚಂದಾ ಪಾವತಿ ಮಾಡಬಹುದು.

IF UNDELIVERED PLEASE RETURN TO SENDER

Published for K.S.S.T.A. by K. Narahari
# 55, Yadavasmruthi, 1st Main, Sheshadripuram,
Bangalore - 560 020. ✆ : 080-23466495
Printed at : RASHTROTTHANA MUDRANALAYA, Bangalore - 560 019.